847
M. Krishnayya,
NIDIMUNDA HOUSE,
ಶ್ರೀ: P.O. KAVU, PUTTUR TK. (S.K.)

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

M. KRISHNAYYA
NIDIMUNDA HOUSE
P.O. KAVU, Puttur Tk. S.K.

★

ಯಕ್ಷಗಾನ

ಅಂಗದಸಂಧಾನ

★

OFFICE OF THE ... S.K.
No......................
DATE......................

ಆರನೆಯ ಅಚ್ಚು: ೧೯೫೨

ಶ್ರೀಕೃಷ್ಣಮುದ್ರಣಾಲಯ ಉಡುಪಿ

ನಾಲ್ಕಾಣೆ

ಪಾತ್ರಗಳ ವಿವರ

ರಾಮ	ಶುಕ
ಲಕ್ಷ್ಮಣ	ಮಯ ವಿಶ್ವಕರ್ಮರು
ಸುಗ್ರೀವ	ಮಂಡೋದರಿ
ದ್ವಿವಿದ, ಶತಬಲಿ, ಮುಂತಾದ ಕಪಿಗಳು	ವಿದ್ಯುಜ್ಜಿಹ್ವ
	ಸೀತೆ
ಅಂಗದ	ಸರಮೆ ತ್ರಿಜಟೆಯರು
ಹನುಮಂತ	ಇಂದ್ರಜಿತು
ಲಂಕಾನಗರದ ಜನರು	ವಿಭೀಷಣ
(ಬ್ರಾಹ್ಮಣ, ಮಾಣಿ, ಹೆಂಗಸರು)	ಮಿತ್ರಘ್ನ
ಪ್ರಹಸ್ತ	ರಾಮನ ಮತ್ತು ರಾವಣನ ಕಡೆಯ
ರಾವಣ	ಸೈನಿಕರು—
ಸಾರಣ	ಇತ್ಯಾದಿ

ಎಲ್ಲ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.

847
P. N. Venkata Rao,
Land-Holder,
MADNOOR VILLAGE,
KAVU. P. O. PUTTUR TK. (S.K.)

ಶ್ರೀ

OFFICE OF THE PRESIDENT, ... PANCHAYAT, POST KAVU, S.K.
No.........................

॥ ಶ್ರೀರಾಮಚಂದ್ರಾಯ ನಮಃ ॥

ಶ್ರೀಮದ್ರಾಮಾಯಣದೊಳಗಣ

ಯಕ್ಷಗಾನ

ಅಂಗದಸಂಧಾನ

ಶಾರ್ದೂಲವಿಕ್ರೀಡಿತಂ

ಶ್ರೀರಾಮಂ ದಿವಿಜೌಘಸನ್ನುತಪದಂ ಸೀತಾಮನೋಹ್ಲಾದಕಂ
ಕಾರುಣ್ಯಾಂಬುಧಿಭಕ್ತವತ್ಸಲಹರಿಂ ಸೌಮಿತ್ರಿಸಂಸೇವಿತಮ್ ।
ಮಾರೀಚಾದಿಸಮಸ್ತದೈತ್ಯಮಥನಂ ತ್ರೈಲೋಕ್ಯಸಂರಕ್ಷಕಂ
ವೀರಂ ಪಾವನಪುಣ್ಯನಾಮಚರಿತಂ ವಂದೇ ಸದಾ ರಾಘವಮ್ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕುಶನೆ ಕೇಳ್ವೈ ಪುಷ್ಯ ಶುದ್ಧದ । ದಶಮಿಯಲಿ ಪ್ರಾರಂಭವಾಯಿತು । ಉಸಿರಲದು ಸಂಪೂರ್ಣ ವರ ತ್ರಯೋ । ದಶಿಯೊಳಾಯ್ತು ॥ ೧ ॥ ಆ ಕಪೀಂದ್ರರ ಸಹಸವೆಂತುಟೊ । ನಾಕು ದಿವಸದಿ ಸೇತು ನಡೆದುದು । ನಾಕದಲಿ ಬಹು ಭೇರಿ ಮೊಳಗಿತ । ನೇಕ ರವದಿ ॥ ೨ ॥ [ಕೇಳು ಲವ ಮರು ದಿವಸದಲಿ ಕಪಿ । ಜಾಲ ಸಹಿತೈತಂದು ಶರಧಿಯ । ಮೂಲದೆಡೆಯಲಿ ನಿಂದ ರವಿಜ ವಿ । ಶಾಲದಿಂದ ॥ ೩ ॥ ದ್ವಿವಿದ ಶತಬಲಿ ಮೈಂದ ನಳ ಗಜ । ಗವಯ ಪನಸ ಗವಾಕ್ಷ ಕೇಸರಿ । ದಿವಿಜಪತಿಸುತತನುಜ ಸಾರಸ । ಭವ ತನುಜರು ॥ ೪ ॥ ಮರುತನಂದನ ಸುಮುಖ ದುರ್ಮುಖ । ವರ ಸುಷೇಣಾದ್ಯರನು ವಿನಯದಿ । ಕರೆಕೊಳುತ ನಡೆತಂದು ರಾಮನೊ । ಲೊರೆದ

ನಿಂತು ॥ ೫ ॥] ಭಾನುನಂದನನಾಗಲಾ ಕಪಿ । ಸೇನೆಗಳ ಕರೆಕೊಂಡು ಬಂದಾ । ದಾನವಾಂತಕಗೆರಗಿ ಪೇಳ್ದ ನಿ । ಧಾನದಿಂದ ॥ ೩ ॥

ರಾಗ ಯರಕಲಕಾಂಭೋಜ ಅಷ್ಟತಾಳ

ಆಯಿತು ಸೇತು ಕಟ್ಟೆ ರಾಜೇಂದ್ರ । ವಾಯುನಂದನ ತಂದ ಪರ್ವತ ವಿಡೆ ಪೂರ್ಣ ॥ ವಾಯಿತು ॥ ಪ ॥ ಜಾಂಬವ ನೀಲ ಅಂಗದರ ಸಾಹಸವ ನೇ । ನೆಂಬೆ ಹತ್ತತ್ತು ಯೋಜನ ನಡೆದುದು ಸೇತು । ವೆಂಬ ಮಾತಿಗೆ ಶ್ರೀರಾಮ ॥ ವಾನರರ ಕ । ದಂಬವೀಕ್ಷಿಸಿ ನಿಸ್ಸೀಮ । ಲಕ್ಷ್ಮಣನ ಮು । ಖಾಂಬುಜವನು ನೋಡಿ ನಗುತ ಸುಪ್ರೇಮ ॥ ಆಯಿತು ॥ ೧ ॥ ಸುರರ ಪಟ್ಟಣದಿಂದ ತರಿಸಿ ಬೇಕಾದಂಥ । ವರ ಸೋಪಸ್ಕರ ಫಲಾಹಾರವ ಕೊಟ್ಟುಪ । ಚರದ ಮಾತುಗಳ ಹೇಳಿ ॥ ಅನೇಕ ವಿ । ಸ್ತರದ ಸಂತಸವ ತಾಳಿ । ಮುಂದೇನೆಂದು । ತರಣಿನಂದನ ವಿಭೀಷಣರೊಳು ಕೇಳಿ ॥ ಆಯಿತು ॥ ೨ ॥ ಏಳಿ ಚಿತ್ತದೊಳಿದ್ದ ಹದನ ಮಾಡುವುದೆಂದು । ಹೇಳಿ ಕೊಳ್ಳಲು ಭಾನುಸುತ ಮುಂತಾದವರು ಭೂ । ಪಾಲನಾಕ್ಷಣದೊಳಂದು ॥ ಸುಗ್ರೀವನ । ಪಾಳೆಯ ಸಹಿತ ಬಂದು । ಕಟ್ಟೆರುವಂಥ । ಮೂಲದ ಬಳಿಯ ನೋಡುತ ರಾಮ ನಿಂದು ॥ ಆಯಿತು ॥ ೩ ॥

ರಾಗ ಭೈರವಿ ಝಂಪೆತಾಳ

ಭಾನುನಂದನನೆ ಬಲು । ದಣಿದಿರುವರಿವರೆಲ್ಲ । ಕಾಣಲಸದಳ ವೆಮಗೆ । ಕಟ್ಟೆರುವ ಬಗೆಗೆ ॥ ೧ ॥ ಅಂಗದನ ಸಾಹಸಕೆ । ಮೆಚ್ಚದವ ರಾರುಂಟು । ಕಂಗೊಳಿಸಿ ಜಾಂಬವರು । ಕಷ್ಟಕೊದಗಿದರು ॥ ೨ ॥ ಹನುಮಂತ ಗುಣದಿಂದ । ಹಂಗನಿಕ್ಕಿಸಿಕೊಂಡ । ಪನಸನತಿ ಪೌರುಷವ । ನೆನೆಸಲಳವಲ್ಲ ॥ ೩ ॥ ಗಜ ಗವಯ ಶತಬಲಿಯ । ಗಂಭೀರತನಗಳಿಗೆ । ತ್ರಿಜಗದಲಿ ಜೋಡಿಲ್ಲ । ತ್ರಿನಯನೇ ಬಲ್ಲ ॥ ೪ ॥ ಸುಮುಖ ದುರ್ಮುಖ ರುಗಳ । ಸಾಹಸಗಳನು ಪೊಗಳ । ಲಮರಾಧಿಪಗೆ ಸಾಧ್ಯ । ವಲ್ಲವಿದು ವೇದ್ಯ ॥ ೫ ॥ ವೃಷಭ ಕೇಸರಿ ನೀಲ । ಹೃದಯದೊಳಗತಿಶೀಲ । ಪೆಸರ ಪಡೆದವರಿಂದ । ವಿಕ್ರಮಗಳಿಂದ ॥ ೬ ॥ ಏಸು ನಾ ಪೊಗಳಿದರು । ಎಲ್ಲ ವರ ರೀತಿಯೆ ವಿ । ಭೀಷಣನ ಗುಣಕಿನ್ನು । ಪುತ್ಥಳಿಯ ಹೊನ್ನು ॥ ೭ ॥ ನಳನ ಕಷ್ಟಗಳೆಲ್ಲ । ನಾ ಹೇಳಿ ತುದಿಯಿಲ್ಲ । ತಿಳಿಯಬಹುದಿವರ್ಗೆಲ್ಲ । ನಾ ಕೊಡುವ ಸೊಲ್ಲ ॥ ೮ ॥ ಇಂತೆನುತಲವರನೀ । ತೆರದಿ ಪೊಗಳಿದ ಬಳಿಕ । ಕಂತುಪಿತ ಕರೆದಿನಜ । ಗಿಂತೆಂದನಾಗ ॥ ೯ ॥

ರಾಗ ಕೋರೆ ಅಷ್ಟತಾಳ

ಪೋಗಬೇಕಯ್ಯ । ಸೇತುವ ದಾಟೆ । ಸಾಗಬೇಕಯ್ಯ ॥ ಈಗ ನಾ ಮುಂದೆ ತಾ ಮುಂದು ಹೆಣಗದೆ । ಸಾಗರದಲಿ ಬೀಳಲಾಗದಂದದಲಿ ॥ ಪೋಗ ॥ ೧ ॥ ಹಿಂದೆ ಇದ್ದವರು । ಸೇತುವ ದಾಟೆ । ಮುಂದೆ ಹೋದವರು ॥ ಒಂದೇ ಕಡೆಯಲಿ ಠಾಣ್ಯವನಿಕ್ಕಿಯಿರಲಿ ಹೀ । ಗೆಂದು ಕಟ್ಟಳೆಯಾದ ಒಂದು ಕಟ್ಟನಲಿ ॥ ಪೋಗ ॥ ೨ ॥ ಅಲ್ಲಿ ಕಂಡುದನು । ಮುಟ್ಟದಿರೊಂದು । ಹುಲ್ಲು ಕಡ್ಡಿಯನು ॥ ಎಳ್ಳಿನಷ್ಟಾದರು ಸರ್ವರು ಕೂಡಿಕೊಂ । ಡಲ್ಲದೊಬ್ಬೊಬ್ಬರು ತಿರುಗಾಡಬೇಡಿ ॥ ಪೋಗ ॥ ೩ ॥ ನಡೆಯಲೀ ದಂಡು । ಲಂಕಾದ್ವೀಪ । ದೆಡೆಗೆ ಮುಂಕೊಂಡು ॥ ಎಡೆಯೊಳೊಬ್ಬೊಬ್ಬರು ನಾಯಕವಾಡಿಯ । ಹೊಡೆದಾಡಿಸದೆ ಹಿಂದೆ ಪಿಂಗಡಿಸುತ ಮುಂದೆ ॥ ಪೋಗ ॥ ೪ ॥

ಭಾಮಿನಿ

ರವಿಕುಲೋದ್ಭವನುಚಿತ ವಚನವ । ರವಿಕುಮಾರಕ ಕೇಳ್ದು ಸೇನಾ । ನಿವಹಕಧಿಪತಿಗಳನು ನೇಮದ ಕಟ್ಟನಲಿ ನಿಲಿಸಿ ॥ ರವಿಕಿರಣವಡಗಲು ಮಹಾಂಬುಧಿ । ರವ ಮರೆಸೆ ಕಪಿಸೇನೆ ನಡೆದುದು । ಭುವನಕತಿಶಯಕೀರ್ತಿ ರಘುರಾಜೇಂದ್ರಚಂದ್ರಮನ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ನಡೆದು ದಳಪದಹತಿಯ ರಭಸಕೆ । ನಡುಗುತಿರ್ದುದು ಸೇತು ನೀರಿನ । ಹಡಗಿನಂತೊಲೆದಾಡುತಿರ್ದುದು । ಬುಡವು ತುದಿಗೆ ॥ ೧ ॥ ಕುಂಭಕರ್ಣಾದಿ ಗಳ ಪ್ರಾಣವ । ಕೊಂಬುದಕೆ ಮುಂದಾಗಿ ಚರಣ ಮ । ಹಾಂಬುಧಿಯ ಸೇತುವಿನೊಳಿಟ್ಟನು । ಅಂಬುಜಾಕ್ಷ ॥ ೨ ॥

ರಾಗ ಕಾಂಭೋಜ ಏಕತಾಳ

ರಾಮ ಬಂದನು । ರಾಕ್ಷಸಕುಲ । ಭೀಮ ಬಂದನು ॥ ರಾಮ ॥ ಪ ॥ ಕಾಮರೂಪಿಗಳಾದ ಕಪಿ । ಸ್ತೋಮವನ್ನು ಕೂಡಿಕೊಂಡು ॥ ರಾಮ ॥ ಅ ॥ ಘಳಿಗೆ ಘಳಿಗೆ ಹೊಳೆವಾಕಾಶ । ದೊಳಗೆ ಭೇರಿ ಮೊಳಗುತ್ತ । ಸುಳಿಗಳಿಂದ ತೆರೆಗಳೆದ್ದು । ಕಳಕಳಿಸಿ ತೊಳಗುತ್ತ ॥ ನಳಿನನಾಭನಡಿಗೆ ಪುಷ್ಪ । ಮಳೆಗಳು ಬಂದಿಳಿವುತ್ತ । ಭಳಿರೆ ಪಾದ ಜತನವೆಂದು । ಕೆಲದಿ ಭಟರು ಹೊಗಳುತ್ತ ॥ ರಾಮ ॥ ೧ ॥ ದಾಶರಥಿಯ ಕಣ್ಣೆದಿರಿನೊ । ಳಾ ಸಮುದ್ರದಿ

ಬೀಳುತ್ತ । ಭಾಷೆ ಪಂಥದಿಂದ ನೀರೊ । ಳೀಸಿ ಮುಳುಗುತೇಳುತ್ತ ॥ ಏಸ ರಾಳುದ್ದುದಕವುಂಟೆಂ । ಬಾ ಸುದ್ದಿಗಳ ಕೇಳುತ್ತ । ಬೀಸಿ ಬಾಲದಿಂದ ನೀರಾ । ಕಾಶದೆಡೆಗೆ ಚಿಮ್ಮುತ್ತ ॥ ೨ ॥

ವಾರ್ಧಿಕ

ಅಣುಗ ಕೇಳಿಂತಾರು ದಿವಸ ನಡೆದುದು ದಂಡು । ಗೊಣಗುಟ್ಟದತ್ತಿತ್ತ ಸುಗ್ರೀವನಾಜ್ಞೆಯಲಿ । ಗಣನೆಗೆಪ್ಪತ್ತೇಳು ಕೋಟಿ ಕಪಿನಾಯಕರು ರಾಮ ಲಕ್ಷ್ಮಣರು ಸಹಿತ ॥ ಬಣಗು ರಕ್ಕಸರಿತ್ತ ಕಾವಲಿದ್ದವರತ್ತ । ಜುಣುಗಿದರು ಪಟ್ಟಣಕೆ ಬಂತು ದುರ್ದೆಸೆಯೆನುತ । ದಿನ ಮೂರರೆಣಿಕೆಯಲಿ ದುರ್ಗದ ಸಮೀಪದೊಳ್ ಬೀಡೆತ್ತಿತಾ ರಾಮನ ॥ ೧ ॥

ರಾಗ ಪಂತುವರಾಳಿ ಅಷ್ಟತಾಳ

ಗುಲ್ಲು ಹೆಚ್ಚಿತು ಲಂಕಾಪುರದಲ್ಲಿ । ಕಪಿ । ಪಾಳ್ಯ ಮುಂತಾಗಿ ಪಟ್ಟಣವ ಮುತ್ತಿದರೆಂಬ ॥ ಗುಲ್ಲು ॥ ಪ ॥ ಪಟ್ಟಣಜನ ಬಾಯ ಬಿಡುತಲೆ । ಅಯ್ಯೋ । ಕೆಟ್ಟೆವು ಪಾಪಿ ರಾವಣನಿಂದೆನುತಲೆ ॥ ಕಟ್ಟುತ ಸರಕ ತೆಗೆವುತಲೆ । ಊರ । ಬಿಟ್ಟಾರಣ್ಯವ ಸೇರಿ ಬದುಕುವೆವೆನುತಲೆ ॥ ಗುಲ್ಲು ॥ ೧ ॥ ಪೆಟ್ಟಿಗೆಗಳನು ಕಟ್ಟಿಡು ಮಾಣಿ । ಸಾಕು । ಕೆಟ್ಟಿತು ದೇವತಾರ್ಚನೆಯ ತುಂಬಿಡು ಗೋಣಿ ॥ ಪಟ್ಟೆಯ ತೆಗೆದು ಇಟ್ಟಳು ರಾಣಿ । ಎಂಬ । ಭಟ್ಟರುಗಳು ಊರು ಬಿಟ್ಟು ಪೋಗುವ ವಾಣಿ ॥ ಗುಲ್ಲು ॥ ೨ ॥ ಗೋಧನಗಳನೆಲ್ಲ ಬಿಟ್ಟರು । ಕಡಲೆ । ಗೋಧಿ ಬೆಲ್ಲಗಳ ಕಂಡವರಿಗೆ ಕೊಟ್ಟರು ॥ ಹಾದಿಹಾದಿಯೊಳು ಬೊಬ್ಬಿಟ್ಟರು । ಖೂಳ । ರಾದ ದಾನವರ ದುರ್ಗದಲಿ ಸಾಲಿಟ್ಟರು ॥ ಗುಲ್ಲು ॥ ೩ ॥ ಗಡಿಗೆ ಮಂಡೆಗಳೆಲ್ಲ ಹೊತ್ತರು । ಕೆಲ । ರಡಿಗೆ ಊಟಗಳೆಂಬ ಗೊಡವೆಗೆ ನಿತ್ತರು ॥ ಗಡಿಯ ಬಾಗಿಲನೆಲ್ಲ ಕಿತ್ತರು । ಹಿಂದೆ । ಸುಡುಗಾಡಿಗೆ ಹೋದ ಬಗೆಯನೆಚ್ಚರಿತರು ॥ ಗುಲ್ಲು ॥ ೪ ॥ ಕೇರಿಕೇರಿಯೊಳಿಹ ಮನೆಗಳ । ಅಲ್ಲಿ । ನಾರಿ ಪುರುಷರು ಖೋಯೆಂಬ ಗರ್ಜನೆಗಳ ॥ ಊರ ಬಿಟ್ಟೋಡುವ ಭರಗಳ । ಕಪಿ । ವೀರರು ನೋಡುತ್ತ ನಗುವ ಸಂಭ್ರಮಗಳ ॥ ಗುಲ್ಲು ॥ ೫ ॥

ವಾರ್ಧಿಕ

ತನಯರಿರ ಕೇಳಿ ಲಂಕಾಪುರದ ಗಜಬಜವ । ಮುನಿವರರು ತಿಳಿದು ರಾಮನ ಪರಸಿ ಪೋದಡಾ । ದಿನದಿ ರವಿಬಿಂಬ ಪಶ್ಚಿಮಕಡರಲಾ ರಾತ್ರಿ ಜನವಾರ್ತೆಯಂ ಕೇಳುತ ॥ ಮನನೊಂದು ಮಂತ್ರಿ ಪ್ರಹಸ್ತ ರಾವಣನೆಡೆಗೆ । ಘನಬೇಗ ಬಂದು ನಿದ್ರಾಲಯವನೊಳಪೊಗುತ । ಇನಕುಲೇಂದ್ರನ ಸೈನ್ಯ ಸಾಗರದ ವೃತ್ತಾಂತವನು ಪೇಳ್ದನನುನಯದಲಿ ॥ ೧ ॥

ರಾಗ ಧನಶ್ರೀ ಅಷ್ಟತಾಳ

ಕೇಳಯ್ಯ । ಮಾತ । ಕೇಳಯ್ಯ ॥ ಪ ॥ ಪೇಳುವೆನಿಂದೊಂದು ಪೊಸ ಸುದ್ದಿ ಕಿವಿಗೊಟ್ಟು ॥ ಕೇಳಯ್ಯ ॥ ಅ ॥ ಬಾಲೆಯ ನೀವು ತಂದಾಕೆಯ ಪತಿಯೆಪ್ಪ । ತ್ರೇಳು ಕೋಟಿ ಕಪಿಗಳ ಕೂಡಿ । ಅಬ್ಧಿ । ಗಾಲಸ್ಯಗೊಳದೆ ಸೇತುವ ಹೂಡಿ । ನೀರ । ಮೇಲೆ ಬಪ್ಪಂತೆ ದಾರಿಯ ಮಾಡಿ । ದಾಟಿದರು ಗಾಢ । ಬಂದರಿದೆ ನೋಡಾ । ಇ । ನ್ನಾಲೋಚಿಸಿದರೆ ಮಾಡುವುದೇನು । ಲಯ । ಕಾಲ ಬಂದೊದಗಿತು ಮತ್ತೇನು ॥ ಕೇಳಯ್ಯ ॥ ೧ ॥ ಹಿಂದುದ್ಯಾವನವನ್ನು ಕೆಡಿಸಿದ ಕಪಿಯಂಥ । ದೊಂದೊಂದು ಲಕ್ಷ ಸಾವಿರವಂತೆ । ಕೆಲವು । ಮಂದೆಯಾಗಿರ್ಪ ಭೀಕರವಂತೆ । ಕಯ್ಯೊ । ಳೊಂದೊಂದು ವೃಕ್ಷ ಪರ್ವತವಂತೆ । ಮೆರೆದಿಹರಂತೆ । ಕಾಯ ಸ್ಥಿರವಂತೆ । ಅವರ್ । ಹಿಂದಕೆ ಪಡೆದಿಹ ವರವಂತೆ । ನಮ್ಮ । ಕೊಂದೆವೆನ್ನುವ ಭರವಸವಂತೆ ॥ ಕೇಳಯ್ಯ ॥ ೨ ॥ ಬೇವ ನೋಡುವುದಕ್ಕೆ ಕಳುಹಿದ ಶುಕನಿಗೆ । ದೇವರನುಜರು ನೋಡಿದರಂತೆ । ಪಿಡಿದು । ಕಾವಲ ಮನೆಗೆ ದೂಡಿದರಂತೆ । ಓಡಿ । ಬಾಹನೆಂದಂಕೆ ಮಾಡಿದರಂತೆ । ಇದು ದಿಟವಂತೆ । ಸಟೆಯಲ್ಲಂತೆ । ಬಲು । ಕೋವಿದ ವೀರ ಮರ್ಕಟರಂತೆ । ರಾಜ । ಸೇವೆಯೊಳಗೆ ಬಲು ಭಟರಂತೆ ॥ ಕೇಳಯ್ಯ ॥ ೩ ॥

ಕಂದ

ಇಂತಾ ವೈರಿಗಳಂದವ । ಮಂತ್ರೀಶ್ವರ ಪೇಳೆ ಕೇಳ್ದು ದಶಕಂಧರನುಂ ॥ ಅಂತರ್ಭಾವವನರಿಯದೆ । ಇಂತೆಂದನು ಸಾರಣಂಗೆ ರಾಕ್ಷಸರರಸಂ ॥ ೧ ॥

ರಾಗ ಕಲ್ಯಾಣಿ ಏಕತಾಳ

ತಿಳಿದು ಬಾ ರಾಮನ ಪಾಳ್ಯದಂಗವನೆಲ್ಲ । ಬಲವಂತರೊ ನಿಧಾ । ನರೊ ಎಂಬ ಬಗೆಯ ನೀ ॥ ತಿಳಿದು ॥ ಪ ॥ ಮಂಗಗಳೆಷ್ಟುಂಟು । ಸಿಂಗಲೀಕಗಳೆಷ್ಟು । ಸಂಗಡ ಮುಸುಗಳೆ । ಷ್ಟುಂಟೆಂಬ ಬಗೆಯ ನೀ ॥ ತಿಳಿದು ॥ ೧ ॥ ಉಂಬುದೇನಾ ರಾಮ । ಕೊಂಬುದೇನಾ ತಮ್ಮ । ತಿಂಬುದೇನಾ ಸೇನೆ । ಯೆಂಬಂಥ ಬಗೆಯ ನೀ ॥ ತಿಳಿದು ॥ ೨ ॥ ಅನ್ನಾಹಾರಗಳೇನು । ಎಣ್ಣೆ ನೀರುಗಳೆಲ್ಲಿ । ಹಣ್ಣುಹಂಪಲುಗಳ । ತಿನ್ನುವ ಬಗೆಯ ನೀ ॥ ತಿಳಿದು ॥ ೩ ॥

Scanned by CamScanner

ಮಡದಿಗೋಸುಗ ಬಂದು । ಕಡಿದಾಡಿ ನಿಲುವರೊ । ಸಡಗರವನು ತೋರಿ ।
ತಿರುಗಿ ಪೋಪರೊ ಎಂದು ॥ ತಿಳಿದು ॥ ೪ ॥ ನಮ್ಮವನಿಗು ರಾಮ ।
ಗೊಮ್ಮನಸೊ ಇಕ್ಕಟ್ಟೊ । ತಮ್ಮೊಳೆಂತಿಪ್ಪರೆಂದು । ಘಮ್ಮನೆ ಇರುಳೆ ನೀ ॥
ತಿಳಿದು ॥ ೫ ॥

ಕಂದ

ಬಂದಾ ಸಾರಣ ಪಾಳ್ಯದೊ । ಳಂದಿರುಳಲಿ ತಿರುಗಲವನ ಕೈಸೆರೆ
ಪಿಡಿದುಂ ॥ ಹಿಂದಿರ್ದಾತನ ಸಹಿತಲೆ । ತಂದಿದಿರಲಿ ನಿಲಿಸಿ ಪೇಳ್ದ ಭಾಸ್ಕರ
ತನುಜಂ ॥ ೧ ॥

ರಾಗ ಕಾಪಿ ಅಷ್ಟತಾಳ

ಇವನೀಗ ಮೊದಲು ಬಂದಾತ । ಕಪ । ನವ ಮಾಡಿ ಕೈಸೆರೆ ಸಿಕ್ಕಿ
ಕೊಂಡಾತ ॥ ಇವ ॥ ಪ ॥ ಇಂದು ಬಂದವನಿವನೀಗ । ಪಾಳ್ಯ । ದಿಂದ
ಕಳ್ಳರ ಹಾಗೆ ತಿರುಗಿ ಪೋಪಾಗ ॥ ಕಂದನಂಗದ ಕಂಡು ಬೇಗ । ಎಳೆ ।
ತಂದ ರಾವಣನ ದೂತರು ಇವರೀಗ ॥ ಇವ ॥ ೧ ॥ ಮುಂದಕ್ಕೆ ಕರೆಸಿದನ
ವರ.। ದಯ । ದಿಂದುಪಚರಿಸಿ ಕುಳ್ಳಿರಿಸಿಕೊಂಡವರ ॥ ಬಂದುದೇಕೆಂದು
ಬಂದವರ । ಕೇಳ । ಲಂದು ವಿಸ್ತಾರದಿ ಪೇಳಿದರ್ ವಿವರ ॥ ಇವ ॥ ೨ ॥ ನೆಲೆ
ಯಾದ ಮಾತನಾಡಿದರೆ । ಪ್ರಾಣ । ಉಳಿಯದು ನೀವ್ ನಮ್ಮ ಮುನಿದು
ನೋಡಿದರೆ ॥ ಕಲಹ ಸಾಧನವ ಮಾಡಿದರೆ । ಯಮ । ಗಳವಲ್ಲ ರಾಕ್ಷಸ
ರೊಳಗೆ ಕೂಡಿದರೆ ॥ ಇವ ॥ ೩ ॥

ರಾಗ ಕಾಂಭೋಜ ಝಂಪೆತಾಳ

ರಘುವೀರ ಕೇಳು ರಾವಣನ ಸೌಭಾಗ್ಯಗಳ । ಪೊಗಳಲಳವಲ್ಲ ಫಣಿ
ಪತಿಗೆ ॥ ಅಗಣಿತನು ಕುಂಭಕರ್ಣನು ತಮ್ಮ ಶಕ್ರಜಿತು । ಮಗ ಧನಪನೀತ
ಗಗ್ರಜನು ॥ ೧ ॥ ಈರೇಳು ಜಗದೊಡೆಯತನ ಕರೆದಡೋಯೆಂದು । ಮೋರೆ
ದೋರುವಳು ಮಹಾಲಕ್ಷ್ಮಿ ॥ ವೈರಿಗಳಿಗಸದಳವಾಗಿರುವ ಲಂಕಾದುರ್ಗ ।
ಸೇರಿಹುದು ಸಕಲ ಸೌರಂಭ ॥ ೨ ॥ ಜಾನಕಿಯ ಕಳವಿನಲಿ ತಂದು ದನುಜನ
ಬಿಟ್ಟು । ಹೀನಗುಣವಿದು ಎರಡು ಹೊರತು ॥ ಏನು ಬಗೆಯಲಿ ಕಂಡರೆಮ್ಮ
ವರ ಜಯಿಸುವ ಸ । ಮಾನದವರಿಲ್ಲವಿದರೊಳಗೆ ॥ ೩ ॥ ಭೇತಾಳ ಬ್ರಹ್ಮ
ರಾಕ್ಷಸರೆಸೆವ ಸಬಳವೊನೆ । ಈತಗಳ ತಗಲಿದಗೆ ನೊಂದು ॥ ವೈತುರಿಸಿ
ಪಲ್ಗಿರಿದು ವಣಕುತುರಿ ಕಟ್ಟೆ ಕಪಿ । ಪೋತಂಗಳೋಡದಿರ್ದಪುದೆ ॥ ೪

ಕಂಡುದನು ಪೇಳಿದರೆ ಕೋಪವೇತಕೆ ಪೇಳು । ಪುಂಡರೀಕದಳಾಕ್ಷ ರಾಮ ॥
ದಂಡಿಸಲಿನ್ನೇಕೆ ಸಂಧಾನವೆ ನೆಲೆಗೊಳಿಸಿ । ಹೆಂಡತಿಯನೊಯ್ಯುವುದತಿಲೇಸು ॥

ರಾಗ ಪಂತುವರಾಳಿ ರೂಪಕತಾಳ

ನೀತಿಯಲ್ಲ ನೀವು ಬಂದುದು । ರಾಮಚಂದ್ರ । ನೀತಿಯಲ್ಲ ನೀವು
ಬಂದುದು ॥ ಪ ॥ ನೀತಿಯಲ್ಲ ನೀವು ನ । ಮ್ಮಾತನೊಡನೆ ಸಮರದಲ್ಲಿ ।
ಭೂತನಾಥಗರಿದು ಸೋಲ್ವ । ರೀತಿಯಿಲ್ಲವೆಂಬುದೇನೀ । ಕೋತಿಕುಲಗಳೇನ
ಮಾಳ್ಪವು ॥ ಶರದ ಮೊನೆಯೊ । ಳೋತು ಬಡಿದರೆಂತು ತಾಳ್ವವು ॥ ಹಲ್ಲ
ಕಿರಿದು । ಮೈಯ ತುರಿಸಿಕೊಂಡು ನೋಳ್ಪವು ॥ ನೀತಿಯಲ್ಲ ॥ ೧ ॥ ದೇವದೈತ್ಯ
ರೊಮ್ಮೆಗಿವನ । ಸೇವೆ ಮಾಡಿ ಕಳೆವರ್ದಿನವ । ಸಾವುದಿಲ್ಲವೆಂಬ ವರವು ।
ದೇವ ಕುಂಭಕರ್ಣಗುಂಟು । ದೇವರೊಡೆಯಜಿತು ಕುಮಾರಕ ॥ ಲಕ್ಷ್ಮಿ
ಕರೆದ । ಡೋಯೆನಿಪ್ಪ ಭಾಗ್ಯದಾಯಕ ॥ ಸಕಲ ಶಾಸ್ತ್ರ । ಕೋವಿದಾತ ನೀತಿ
ಪೂರಕ ॥ ನೀತಿಯಲ್ಲ ॥ ೨ ॥ ಬಿನುಗಳಾದ ತಂಗಿ ಶೂ । ರ್ಪನಖೆಯೆಂದ
ಮಾತ ಕೇಳಿ । ಜನಕಸುತೆಯ ತಂದು ವಿಭೀ । ಷಣನ ಬಿಟ್ಟುದೊಂದು
ಮಾತ್ರ । ಘನತೆಯಲ್ಲಿದೆರಡು ಗುಣಗಳು ॥ ಅದರೊಳವನಿ । ಗನುಭವಿಸದೆ
ಬಿಡದು ವಿಧಿಗಳು ॥ ಮಿಕ್ಕ ಭಾಗ್ಯ । ವೆಣಿಸಿ ತುದಿಯಗಾಣೆವಿವನೊಳು ॥
ನೀತಿಯಲ್ಲ ॥ ೩ ॥

ಕಂದ

ಒಡೆಯನ ಗುಣಮಂ ಪೊಗಳುವ । ಸಡಗರವಂ ಕಪಿಗಳೆಲ್ಲ ಕಾಣುತ
ಜರೆದುಂ ॥ ಹೊಡೆ ಬಡೆಯೆಂಬ ಪ್ಲವಂಗರ । ನೊಡಬಡಿಸುತ ರಾಮ ಪೇಳ್ದ
ಸುಗ್ರೀವನೊಳುಂ ॥ ೧ ॥

ರಾಗ ಭೈರವಿ ಝಂಪೆತಾಳ

ಕಪಿರಾಜ ಕೇಳಿದಕೆ । ಕೋಪವೇತಕೆ ನಮಗೆ । ಅಪರಾಧವಿನಿತಿಲ್ಲ ।
ಪರಿಯ ಗ್ರಹಿಸೆಲ್ಲ ॥ ೧ ॥ ಬಂಟರಾದವರುಗಳು । ಬಲ್ಲಾತನೊಡೆಯನೆಂ ।
ದೆಂಟುಮಡಿ ಗುಣವ ನಿಜ । ವೆಂಬುದೇ ಸಹಜ ॥ ೨ ॥ ಕಂಡಮಾತಾಡಿದರು ।
ಕಪಟದವರಿವರಲ್ಲ । ಕೊಂಡಾಡದಿರರೆಮ್ಮ । ಕಳುಹುವುದೆ ಧರ್ಮ ॥ ೩ ॥
ನಮ್ಮ ಶೌರ್ಯಗಳಿವರು । ತಮ್ಮವರೊಳಾಡುವರು । ಸನ್ಮತದಿ ಕಳುಹು
ವುದು । ಧರ್ಮವಿದು ನಮಗೆ ॥ ೪ ॥ ಕಡಲಾಧಿಪತಿ ಕೊಟ್ಟ । ಕಾಣಿಕೆಯ
ವಸ್ತುಗಳ । ನುಡುಗರೆಗಳನು ಕೊಟ್ಟು । ಕಳುಹಿದರು ಬಿಟ್ಟು ॥ ೫ ॥ ತಳಿ

ಹೋಗದಿರೆಂದು ತಾಕೀದಿಗಳಲಂದು । ಪಾಳ್ಯದಿಂದಟ್ಟಿದರು । ಪಟ್ಟಣಕ್ಕ ವರು ॥ ೬ ॥ ಬಂದು ರಾವಣನ ಕೂ । ಡೊಂದೆರಡು ಮಾತಾಡೆ । ಮಂದಿರಕೆ ತೆರಳಲವ । ರಂದು ಬೆಳಗಾಯ್ತು ॥ ೭ ॥

ರಾಗ ಪಂತುವರಾಳಿ ಅಷ್ಟತಾಳ

ಸಾಂಬ ಸದಾಶಿವ । ಸಾಂಬ ಸದಾಶಿವ । ಸಾಂಬ ಸದಾಶಿವ । ಶಂಭು ಶಂಕರನೆ ॥ ಸಾಂಬ ॥ ಪ ॥ ದಿನಕರನುದಿಸದ । ಮುನ್ನ ರಾವಣನೆದ್ದು । ಘನಬೇಗದಿಂದ ಮ । ಜ್ಜನವ ಮಾಡಿದನು ॥ ಸಾಂಬ ॥ ೧ ॥ ಲಿಂಗ ಪೂಜೆಯ ಮಾಡಿ । ಪ್ರಜೆಗಳ ಮಕ್ಕಳ । ಸಂಗಡದಲಿ ಸಿಂಹಾ । ಸನವನೇರಿ ದನು ॥ ಸಾಂಬ ॥ ೨ ॥ ಕ್ಕರಿಸಲಾ ಮಯ ವಿಶ್ವ । ಕರ್ಮರಿಬ್ಬರು ದುರ್ಗ । ಭರಿತವಂದೆಸಗಿದ । ರರೆನಿಮಿಷದಲಿ ॥ ಸಾಂಬ ॥ ೩ ॥ ಏಳು ಸುತ್ತಿನ ಕೋಟೆ । ಯುಗಳೆಬ್ಬಿಸುತ್ತೇಳು । ತಾಳೆಯ ಮರದುದ್ದ । ಸೀಳು ಕಲ್ಲಿನಲಿ ॥ ಸಾಂಬ ॥ ೪ ॥ ಏಳು ಸುತ್ತಿನೊಳಾನೆ । ಕುದುರೆ ಭಂಡಿಗಳ ಭೇ । ತಾಳ ರಾಕ್ಷಸರನ್ನು । ಸಾಲು ನಿಲಿಸಿದರು ॥ ಸಾಂಬ ॥ ೫ ॥ ಅಗಳು ಹತ್ತಿರಕೆ ವೈ । ರಿಗಳು ಬಂದರೆ ಜಾರಿ । ನೆಗೆದು ಬೀಳುವ ಹಾಗೆ । ತೆಗೆದರು ಜರಿಯ ॥ ಸಾಂಬ ॥ ೬ ॥ ಅಡವಿ ಕೋಡಗಗಳ ಮದ್ದು ಗುಂಡುಗಳಿಂದ । ಕೆಡೆವ ರಾಕ್ಷಸರ ವಿಂ । ಗಡವ ಮಾಡಿದರು ॥ ಸಾಂಬ ॥ ೭ ॥ ಸಣ್ಣ ಸಾಸಿವೆ ಸೀಗೆ । ಮೆಣಸಿನ ಪುಡಿ ಕಾಸಿ । ದೆಣ್ಣೆಕೊಪ್ಪರಿಗೆಗ । ಳೊಲೆಯನಿಕ್ಕಿದರು ॥ ಸಾಂಬ ॥ ೮ ॥ ಹೊಗುವ ಹೆದ್ವಾರಿಯ । ಕೊತ್ತಳಂಗಳ ಮೇಲೆ । ಅಗಣಿತದಾ ಘರಂ । ಗಿಗಳನಿಕ್ಕಿದರು ॥ ಸಾಂಬ ॥ ೯ ॥ ಈಟಿ ಸಬಳ ಕೊಟ್ಟು । ತೊಂಭತ್ತನಾಲಕು । ಕೋಟಿ ದಾನವರನ್ನು । ನೀಟು ನಿಲಿಸಿದರು ॥ ಸಾಂಬ ॥

ವಾರ್ಧಿಕ

ಭರತ ಮೊದಲಾದ ನವಖಂಡಗಳ ಭೂಭುಜರ । ಕರೆಸಿದನು ಗರುಡ ಗಂಧರ್ವ ಭುಜಗಾಧಿಪರ । ಕರಿ ತುರಗ ರಥ ಪತ್ತಿ ರಾಕ್ಷಸರ ನೆರಹಿ ಸಂಗ ರಕೆ ಸನ್ನಾಹವಾಗಿ ॥ ಹೊರಸುತ್ತಿನಗಳ ನೀಟಿನ ಮೇಲೆ ನಿಂದು ವಾ । ನರ ಸೈನ್ಯಮಂ ಕಾಣಬೇಕೆಂದು ಶುಕ ಸಾರ । ಣರ ಕರೆಸಿ ವಿವರಮಂ ಬೆಸ ಗೊಳಲು ಶುಕನು ಕೈಬೆರಳಿಂದ ತೋರಿಸಿದನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ನೋಡಿದೆಯಾ ದೈತ್ಯರಾಯ ನಿನ್ನನುಜನ । ಕೂಡಿ ಏಕಾಂತದಿಂದ ॥ ಆಡುವ ಮಾತಿಗೆ ಕಿವಿಗೊಟ್ಟು ನಮ್ಮನು । ನೋಡುವಾತನೆ ರಾಘವ ॥ ೧ ॥

ಜೋಡಾಗಿ ಎರಡು ಬಿಲ್ಲೊಂದು ಕೈಯಲಿ ಪಿಡಿ । ದಾಡುವಾತನೆ ಲಕ್ಷ್ಮಣ ॥ ಮೂಡಣ ದೆಸೆಯಲ್ಲಿ ನಿಲ್ಲದಿರೆಂದು ಕೈ । ಮಾಡುವಾತನೆ ಸುಗ್ರೀವ ॥ ೨ ॥ ಕುಂಭಿನಿಯುದಿಸದ ಮುನ್ನ ಪುಟ್ಟಿದನೀತ । ನೆಂಬರು ಜಗದೊಳೆಲ್ಲ ॥ ಅಂಬಿಕೆ ಶಿವನಿಗೆ ಮದುವೆಯಾದಾಗ ಹ । ತ್ತೊಂಭತ್ತು ವರುಷವಂತೆ ॥ ೩ ॥ ಜಂಭಾರಿ ಮೊದಲಾದ ದಿವಿಜರಿವಗೆ ನಮೋ । ಎಂಬುದು ಸಹಜವಂತೆ ॥ ಅಂಬುಜಾಸನನ ಚೊಚ್ಚಲ ಕಂದನವ ನೋಡು । ಜಾಂಬವನಧಿಕಶೌರ್ಯ ॥ ೪ ॥ ವನದಲ್ಲಿ ಜಂಬುಮಾಲಿಯ ಕೊಂದು ನಮ್ಮ ಪ । ಟ್ಟಣವ ಹೋಮಿಸಿ ದಾತನ ॥ ಹನುಮಂತನದಕೊ ಲಕ್ಷ್ಮಣನ ಹತ್ತಿರ ನಿಂದು । ಕೊನರುವಾತನ ನೀ ನೋಡೈ ॥ ೫ ॥ ಛಲದಂಕನದೆ ನೋಡು ವಾತಸಂಭವನ ಬೆ । ನ್ನಲಿ ತಾನು ಕುಳಿತುಕೊಂಡು ॥ ಬಲು ಭಟನಾಗಿ ಸಿಡಿಲ್ಮರಿಯಂತಿರ್ಪ । ಕಲಹ ವಿಕ್ರಮನಂಗದ ॥ ೬ ॥ ವೃಷಭನವ ಹಿಂದೆ ಕೈಲಾಸದಲಿ ನೀ ನಿಂ । ದಿಸುತಟ್ಟಿ ಜರೆದೆಯಂತೆ ॥ ಅಸುರ ಕೇಳಾ ಪಂಥದಿಂದ ಮರ್ಕಟನಾಗಿ । ಎಸೆದಿರ್ಪ ನದಕೊ ನೋಡು ॥ ೭ ॥ ಜೀಯ ಚಿತ್ತೈಸು ಪಲ್ಗಿರಿದು ಮುಂದುಬ್ಬೆದ್ದು । ಬಾಯೊಳಾರ್ಭಟಿಸುವಾತ ॥ ರಾಯನಪ್ಪಣೆಯಿಂದ ದಳಕೆಲ್ಲ ನೀಲನೇ । ನಾಯಕವಾಡಿಯಂತೆ ॥ ೮ ॥ ಶತಬಲಿ ಸುಮುಖ ದುರ್ಮುಖ ಗಜ ಗವಯರೆಂ । ಬತುಳವಿಕ್ರಮರದಕೊ ॥ ಮಿತಿಯಾಗದೆಣಿಸಿ ರಾಮನ ಪಾಳ್ಯ ದೊಳಗೆ ಬಂ । ದತಿ ಬಲಾನ್ವಿತರ ನೋಡೈ ॥ ೯ ॥ ಉಸಿರುವೆನವರಿಂದ ಬಲದ ಭಾಗದಲಿ ರಂ । ಜಿಸುವಾತನವನೆ ನಳ ॥ ಹೆಸರಿಡಲರಿಯೆ ಮಿಕ್ಕಾದ ವಾನರವೀರ । ರೆಸೆದಿರ್ಪರದಕೊ ನೋಡು ॥ ೧೦ ॥

ಕಂದ

ಈ ಪರಿಯಿಂದಲಿ ವರ್ಣಿಸೆ । ಭೂಪಾಲನ ಪಾಳ್ಯದೊಳಿಹ ಕಪಿನಾಯ ಕರಂ ॥ ಕೋಪಿಸಿ ದಶಕಂಧರನುಂ । ತಾ ಪೌರುಷದಿಂದ ಪೇಳ್ದ ಶುಕ ಸಾರಣರ್ಗಂ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಮರುಳಾದೆಯೇನೊ ನೀ ಬದನೆಕಾಯನು ದೊಡ್ಡ । ಪರಬ್ರಹ್ಮವೆಂಬ ಹಾಗೆ ॥ ಮರದಿಂದ ಮರಕೆ ಲಂಘಿಸುವಂಥ ಕಪಿಗಳ್ಗೆ । ಸರಿಯಿಲ್ಲವೆಂಬ ರೇನೊ ॥ ೧ ॥ ಸೂರಿಯನಿಗೆ ಮೋಡ ಕವಿದರೆ ಬೆದರಿ ಸಂ । ಚಾರವ ಬಿಡುವುದುಂಟೆ ॥ ಪಾರಾಗಿ ಕೆಡುವುದಲ್ಲದೆ ನಮ್ಮೊಳಿದಿರೊಡ್ಡಿ । ಬಾರರಿದೆಲ್ಲ ಸುಳ್ಳು ॥ ೨ ॥ ಬೇರ ಬಲ್ಲವರಿಗೆ ಮರದೆಲೆಯನು ತಂದು । ತೋರಲೇತಕೆ

ಮರುಳೆ ॥ ಮೂರುಲೋಕದ ಗಂಡನೆಂದೆಂಬ ಬಿರುದುಳ್ಳ । ವೀರನಾರಯ್ಯ
ಹೇಳು ॥ ೩ ॥ ಅಂತಕ ಮೊದಲಾದ ದಿವಿಜರು ಸಹಿತತಿ । ಚಿಂತೆಯೊಳಿರು
ತಿಹರು ॥ ಭ್ರಾಂತಿಬುದ್ಧಿಯಲಿ ಬಂದಿದಿರಾಗಿ ರಾಮನು । ಕಾಂತೆಯನೊಯ್ಯು
ದುಂಟೆ ॥ ೪ ॥ ಸರಳಿನ ಮೊನೆಯೆಂದು ತಾಗಿದಡಾ ವೈಯ । ತುರಿಸಿ
ಟಿಟ್ಟಿರಿಗುಟ್ಟುತ್ತ ॥ ಭರದಿಂದೋಡುವ ಕಪಿಪರಿವಾರಗಳಿಗೆ ಸಂ । ಗರದೊಳೆ
ಚ್ಚಾಟವಂತೆ ॥ ೫ ॥ ಏಸು ಮರ್ಕಟರಿದ್ದರೇನಾಯ್ತು ನಮ್ಮ ವಿ । ಭೀಷಣ
ಹೊರತು ಮಿಕ್ಕ ॥ ಸಾಸಿರಸಂಖ್ಯೆಯ ವಾನರಬಲವೆಲ್ಲ । ಕಾಸಿಂದ ಕಡೆ
ನಮಗೆ ॥ ೬ ॥ ದೂಷಣ ತ್ರಿಶಿರ ಮುಂತಾದ ರಕ್ಕಸರನ್ನು । ನಾಶಗೊಳಿ
ಸಿರುವ ॥ ವೈಸಿರಿ ಹಮ್ಮೆಲ್ಲ ಮುರಿಯದಿರ್ದಡೆ ರಾವ । ಣೇಶ ನಾನಲ್ಲ
ಮುಂದೆ ॥ ೭ ॥ ಇನಿತು ಮಾತಾಡುತ್ತಲಿರಲು ತಮ್ಮನ ಕೈಯ । ಧನುವ
ತೆಕ್ಕೊಂಡು ರಾಮ ॥ ಕಣೆಯೊಂದನೆಸೆದು ರಾವಣನ ಶ್ವೇತಛತ್ರ । ವನು
ತುಂಡುಗೈಯಲಾಗ ॥ ೮ ॥ ಇನಸುತ ಹಾರುತೀರ್ರೈದು ಕಿರೀಟವ । ಘನ
ಬೇಗದಿಂದ ತಂದು ॥ ವನಜನಾಭನ ಕಣ್ಣ ಮುಂದಿಡಲದ ಕಂಡು । ಮನದಿ
ಕೋಪಿಸಿದ ರಾಮ ॥ ೯ ॥

ವಾರ್ಧಿಕ

ಲವನೆ ಕೇಳೇಕ ಶರದಿಂದ ರಾವಣನ ಛ । ತ್ರವ ತರಿಯಲಾ ಭಂಗ
ದಿಂದೆ ತಿರುಗಿದನು ಮನೆ । ಗವಮಾನಲಕ್ಷ್ಮಿ ವೈದೋರಿದಳು ಪ್ರಥಮ
ಚುಂಬನ ದಂತಭಗ್ನದಂತೆ ॥ ಹವಣಿಸಿದರಿತ್ತ ರಾಮನ ಪಾಳ್ಯದವರೆಲ್ಲ ।
ಜವದಿ ಲಗ್ಗೆಗೆ ನುಗ್ಗಲಪ್ಪಣೆಯ ಕೊಡಿರೆನಲು । ದಿವಸಾಧಿಪತಿ ಕುಲೋ
ದ್ಭವನವರ ಸಂತವಿಸಿ ರವಿಜಾತಗಿಂತೆಂದನು ॥ ೧ ॥

ರಾಗ ಕಾಪಿ ಅಷ್ಟತಾಳ

ಸಾರಿ ಕೊಂದರೆ ಪಾಪವಿಲ್ಲ । ನಮ್ಮ । ಧಾರಿಣಿಪತಿಗಳ ನಡತೆ
ಯಿದಲ್ಲ ॥ ಸಾರಿ ॥ ಪ ॥ ಇನ್ನಾದರೆಮ್ಮನು ಕಂಡು । ಸತಿ । ಯನ್ನು
ತಂದಿತ್ತು ತಮ್ಮನ ಕೂಡಿಕೊಂಡು ॥ ಚೆನ್ನಾಗಿದ್ದರೆ ಬಂದ ದಂಡು । ಪೋಪು ।
ದನ್ಯಾಯವಲ್ಲ ಕೀರ್ತಿಯನು ಮುಂಕೊಂಡು ॥ ಸಾರಿ ॥ ೧ ॥ ಭ್ರಾಂತಿ
ಬುದ್ಧಿಗಳೆಲ್ಲ ಬಿಡಲಿ । ತನ್ನ । ಪಂಥಪೌರುಷವನಾಚೆಯೊಳು ಕಟ್ಟಿಡಲಿ ॥
ಸಂತಾನ ಸಹಿತ ಬಾಳಿರಲಿ । ಸಾಯು । ವಂಥಾದಿದ್ದರೆ ನಮ್ಮೊಳಿದಿರೊಡ್ಡಿ
ಬರಲಿ ॥ ಸಾರಿ ॥ ೨ ॥ ಸಂಧಾನಕೋರ್ವನ ಕಳುಹಿ । ನಾವೀ । ಗೆಂದ

ಮಾತುಗಳ ರಾಕ್ಷಸನಿಗೆ ತಿಳುಹಿ ॥ ಬಂದರೊಳ್ಳಿತು ಮಾತನುಳುಹಿ ।
ಕಾರ್ಯ । ಹೊಂದದಿದ್ದರೆ ಬರಲಿತ್ತ ತಾನಿಳುಹಿ ॥ ಸಾರಿ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ದಾನವಾಂತಕನೆಂದ ಮಾತಿಗೆ । ಭಾನುಸುತ ತನ್ನಿಂದ ಜ್ಯೇಷ್ಠನ ।
ಸೂನುವನು ಬೀಳ್ಕೊಟ್ಟನರಿ ಸಂ । ಧಾನಗೋಳಲು ॥ ೧ ॥ ಭಾನುಮಾರ್ಗವ
ನಡರಿ ದುರ್ಗವ । ಜಾಣನಂಗದ ಬರಲು ಕೇರಿಯ । ಮಾನಿನಿಯರಂಜಿ
ದರು ಮೊದಲದು । ತಾನೆ ಎಂದು ॥ ೨ ॥ ಸೀರೆಗಳನಡಗಿಸಿದರೆಣ್ಣೆಯ ।
ದೂರದಲಿ ಬಚ್ಚಿಟ್ಟು ಬಂದರು । ನೀರ ಚಿಮ್ಮಿದರೊಲೆಗೆ ಹಿಂದಣ । ಮಾರಿ
ಗಂಜಿ ॥ ೩ ॥ ಬೆದಬೆದರಿ ವಾನರನ ಬಾಲದ । ತುದಿಯನೀಕ್ಷಿಸಿ ಕಿವಿಯೊ
ಳೇಕಾಂ । ತದಲಿ ಮಾತಾಡುವರು ಕೆಲರಿದು । ಬದಲೆನುತಲಿ ॥ ೪ ॥ ಸಣ್ಣ
ವರು ನೋಡಿದರೆ ಬಾಳೆಯ । ಹಣ್ಣುಗಳ ಕರೆಕರೆದು ಕೊಡುವರು । ಪುಣ್ಯ
ವುಳ್ಳುದೆನುತ್ತ ಕೆಲಬರು । ಮನ್ನಿಸುವರು ॥ ೫ ॥ ಇಕ್ಕೆಲದೊಳಂಗಡಿಯ ಕದ
ಗಳ । ನಿಕ್ಕುವವರನು ಹಿಡಿದು ಭರಣಿಯ । ಸಕ್ಕರೆಯ ಮೆಲುತರಮನೆಯ
ನೊಳ । ಪೊಕ್ಕನಾಗ ॥ ೬ ॥ ತಡೆದ ಬಾಗಿಲ ಭಟರ ಮಂಡೆಯ । ಬಡಿದನಾ
ಕಂಕುಳಿನ ಮರದಲಿ । ಕಡೆಗೆ ಕುಳಿತನು ಬಂದಿದಿರು ಚಾ । ವಡಿಯ
ಮುಂದೆ ॥ ೭ ॥

ಭಾಮಿನಿ

ಬಾಲವನು ಸುರುಟಿಕ್ಕಿ ಕುಳಿತನು । ಕಾಲಭೈರವನಂತೆ ಜನರೊ ।
ಡ್ಡೋಲಗದೊಳಿದ್ದವರು ಕೆಲರೊಳಸರಿದರಲ್ಲಲ್ಲಿ ॥ ಕಾಳಗದ ತೆರನಲ್ಲ
ತಮ್ಮವ । ರೂಳಿಗದ ಕಪಿಯೆನುತ ಬಳಿಕ ವಿ । ಶಾಲಮತಿ ನಡೆತಂದು ಮಾತಾ
ಡಿಸಿದನಂಗದನ ॥ ೧ ॥

(ಮದದ ಮೋಡಿಯ ಮಂದಹಾಸದ । ವದನ ಮುದದ ಸ್ವಾಮಿ
ಕಾರ್ಯಾ । ಸ್ಪದದ ಸಂಪತ್ತಿನ ಸಗಾಢದಲಸುರನಿದಿರಿನಲಿ ॥ ಪುದಿದ ಗರ್ವದ
ಗೌರವದಿ ಕು । ಳ್ಳಿದನು ಕುಂಡಲಿಯಂತೆ ಲಾಂಗೂ । ಲದ ವರಾಸನದಲಿ
ನಿರೀಕ್ಷಿಸುತರಿಭಟಾವಳಿಯ ॥)

ರಾಗ ಮಧ್ಯಮಾವತಿ ಏಕತಾಳ

ಏನು ಸಡಗರ ಖಳಸಭಾಸ್ಥಾನ । ತಾ ನೆರೆದಿಹುದು ರಾಕ್ಷಸರ
ವಿತಾನ ॥ ಏನು ॥ ಪ ॥ ಮುಖಗಳೆರಡು ಮೂರು ನಾಲ್ಕೈದರವರ್ಯಾರು ।
ಮುಖ ನಿರೀಕ್ಷಿಸಲಾಗಿ ದಶ ಪರಿಯಂತ ॥ ಮುಖವಿಹುದಿದರೊಳು ಭೂಪುತ್ರಿ

ಯನು ರಾತ್ರಿ । ಮುಖದೊಳು ಕದ್ದು ತಂದಧಮನಾರಯ್ಯ ॥ ಏನು ॥ ೧ ॥ ಹೇಳಲಾಗದೆ ಬಲ್ಲವರು ಭೂಮಿಪಾಲಕ । ಹೇಳಿಕಳುಹಿದಂಥ ರಾಜಕಾರ್ಯವನು ॥ ಹೇಳಿ ಹೋಗಲು ಬಂದೆ ಪ್ರತಿಭಟ ನಾನಲ್ಲ । ಹೇಳಿ ಸೀತೆಯ ತಂದ ಕಳ್ಳನಾರಯ್ಯ ॥ ಏನು ॥ ೨ ॥

ಭಾಮಿನಿ

ನಗರದಹನದ ಕಪಿಯ ಮೋಡಿಯು । ಮಿಗಿಸುತಿದೆ ಮಾತಿನಲಿ ವದನದ । ಹೊಗರು ಹೊಸಪರಿಯಾಗಿ ತೋರುತ್ತಿದೆ ವಿವೇಕಿಸಲು ॥ ವಿಗಡನಿವನಹುದೆಂದು ಮನದಲಿ । ಬಗೆಯುರಿದು ಬಳಿಕಾ ಪ್ರಹಸ್ತನು । ಮುಗುಳುನಗೆಯುಲಿ ನುಡಿದನಾ ಕಪಿರಾಜಪುತ್ರಂಗೆ ॥ ೧ ॥

ರಾಗ ಪಹಡಿ ಅಷ್ಟತಾಳ

ಆರೋ ಬಂದಾ ಕಪಿ ತಾನು । ನಿನ್ನ । ದಾರಟ್ಟಿದರು ಕಾರ್ಯವೇನು । ನೋಡೆ । ಮೂರು ಕಣ್ಣವನಂತೆ ನೀನು । ನಮ್ಮ । ದ್ವಾರಪಾಲಕರನಂಜಿಸು ತಲಿ ಬಲು ಮೊನೆ । ಗಾರನಂದದೊಳತಿ ಗರ್ವದಿ ಕುಳಿತಿಹೆ ॥ ಆರೋ ॥ ೧ ॥ ಲೇಸು ನಾ ಪೇಳ್ವೆ ಬಂದೊಳವ । ಕೇ । ಳಾ ಶೂರ್ಪನಖೆಯು ಕೃತ್ರಿಮವ । ಕಂಡು । ನಾಸಾ ಛೇದಿಸಿ ಕೊಳುಗುಳವ । ಗೈದು । ದೂಷಣಾದ್ಯರ ಶಿರ ವಿಳುಹಿಸಿ ಮೆರೆವಂಥ । ದಾಶರಥಿಯು ಕಡೆ ದೂತನಾಗಿರುವೆನ್ನೈ ॥ ಆರೋ ॥ ೨ ॥ ಮೈಯೊಳಿಷ್ಟರ ಮದವೇಕೆ । ಎರಡು । ಕೈಯ ಪರ್ವತ ವೃಕ್ಷ ಸಾಕೆ । ನ । ಮ್ಮಯ್ಯನವರು ಕಾಂಬಜೋರ್ಕೆ । ಈಗ । ಬಾಯ ಹೊಯ್ಯುವರು ಹೋಗಾ ಕಡೆಯಲಿ ನಿನ್ನ । ಕೈಯಾಯುಧವ ಬಿಟ್ಟು ಕೆಳಗಿಟ್ಟು ಮಾತಾಡು ॥ ಆರೋ ॥ ೩ ॥ ಬೆದರುವುದೇಕೆ ನೀವೆಲ್ಲ । ನಿಮ್ಮೊ । ಳ್ಕದನಕೆ ಬಂದವನಲ್ಲ । ಶ್ರೀ । ಪದುಮಲೋಚನನೆಂದ ಸೊಲ್ಲ । ದಶ । ವದನಗೆ ಹೇಳಿಕಳುಹಿದುದ ಪೇಳಿಯೆ । ಬದಲುತ್ತರವನೊಯ್ವ ಚದುರನು ನಾಕಾಣ್ಯೆ ॥ ಆರೋ ॥ ೪ ॥ ಮರದಿಂದ ಮರಕೆ ಹಾರುವಿರಿ । ಸಂಧಿ । ಮರಿಯಾದೆಗಳನೇನರಿವಿರಿ । ಮಿಗೆ । ಪುರುಬುಗಳೆತ್ತಿ ಹಣ್ಣುವಿರಿ । ನೋಯೆ । ಕಿರಿಕಿರಿ ಕಿರ್‍ರನೆ ಟಿಟ್ಟಿರಿಗುಟ್ಟುತ್ತ । ಭರದಿಂದಲೋಡುವ ಭಟರು ನೀವಲ್ಲವೈ ॥ ಆರೋ ॥ ೫ ॥ ದುರುಳಬುದ್ಧಿಗಳನ್ನು ಕಲಿಸಿ । ಚಾಡಿ । ತರಳೆಯನರಸಗೆ ತಿಳಿಸಿ । ನೀತಿ । ತೊರೆದ ಧರ್ಮವ ನಿತ್ಯ ಗಳಿಸಿ । ಪರ । ತರುಣಿಯರನು ಬಲಾತ್ಕಾರದಿ ಹಿಡಿತಂದು । ಸೆರೆಯೊಳಿಕ್ಕಿಸುವಂಥ ಮಂತ್ರಿ ನೀನಲ್ಲವೈ ॥

ಆರೋ ॥ ೬ ॥ ಅಂಗವಿಲ್ಲದ ಮಾತನಾಡಿ । ದಶ । ನಂಗಳ ಕಳೆಕೊಂಬೆ ಹೇಡಿ । ನಿ । ನ್ನಂಗವಣೆಯು ಬಲು ಮೋಡಿ । ಈಗ । ಭಂಗಿಸಿ ನಾವು ಕೊಂದರೆ ಕೇಳುವವರ್ಯಾರು । ನುಂಗಚೇಷ್ಟೆಯ ಬಿಟ್ಟು ಜತನದಿ ಮಾತಾಡು ॥ ಆರೋ ॥ ೭ ॥ ಇರುಳೊಳು ಕಾಡೆಲ್ಲ ನಡೆದು । ಮೂಗು । ಪರಿಯಂತ ಮದ್ಯವ ಕುಡಿದು । ಅಲ್ಲಿ । ಪರರ ಹೆಂಗಳನಟ್ಟಿ ಹಿಡಿದು । ಮತಿ । ಮರೆದು ಬಳಿಕ ತಲೆತಿರುಗಿ ಬೀಳುತ್ತಲಿ । ನೊರೆನೊರೆ ಕಾರುವ ಖಳರು ನೀವಲ್ಲವೈ ॥ ಆರೋ ॥ ೮ ॥

ರಾಗ ಕೇದಾರಗೌಳ ಅಷ್ಟತಾಳ

ಮಾತಿನೊಳಗೆ ಜಾಣನಹುದು ನಿನ್ನನು ಪೆತ್ತ । ಮಾತೆ ಯಾರಯ್ಯ ಹೇಳು ॥ ತಾತನೆಲ್ಲಿಹನಾವ ದೇಶ ರಕ್ಷಿಸಿದಂಥ । ದಾತನಾರದ ತಿಳುಹು ॥ ೧ ॥ ತಾತ ನಿಮ್ಮವನ ತೊಟ್ಟಿಲ ಬಳಿಯಲಿ ಕಟ್ಟಿ । ದಾತನು ತಾಯಿ ತಾರೆ ॥ ಭೂತಳಪತಿ ರಾಮದೂತನಂಗದನೆಂಬ । ಪ್ರೀತಿಯ ಪೆಸರೆನಗೆ ॥ ೨ ॥ ಲೇಸು ಮಾಡಿದನು ಸುಗ್ರೀವ ಹಿಂದಣ ಮನ । ಕ್ಲೇಶವ ಬಿಡದೆ ನಿನ್ನ ॥ ಕೈಸೆರೆಗಿಕ್ಕಿದನೀಗ ಮನದೊಳಿದ್ದ । ವಾಸಿಯ ನಡೆಸಬೇಡ ॥ ೩ ॥ ದೋಷ ಕರ್ಮವ ತಂದೆ ಮಾಡಿದರಿಂದ ಸ । ರ್ವೇಶನಪ್ಪಣೆಯೊಡ್ಡಿತು ॥ ಆಸುರ ಗುಣಗಳು ಬಂತು ನಿಮ್ಮವನಿಗು । ನೀ ಸೈರಿಸೆರಡು ದಿನ ॥ ೪ ॥ ಅನ್ಯಾಯ ರವಿಜ ಮಾಡಿದರೇನು ನಮಗೆ ನೀ । ಸಣ್ಣವನಾದಮೇಲೆ ॥ ನಿನ್ನ ರಾಜ್ಯವ ನಿನಗಿತ್ತುಪಚಾರದಿ । ಮನ್ನಿಸಿ ಕಳುಹುವೆವು ॥ ೫ ॥ ಕನ್ನೆಯ ಕದ್ದು ತಂದಂಥ ರಾವಣನೆಂಬ । ಕುನ್ನಿ ಯಾರೆಂದೆನುತ ॥ ಕಣ್ಣಿಗೆ ಕಾಣಿಸಿ ಕೊಡಲದರಿಂ ಹೆಚ್ಚು । ಮನ್ನಣೆ ನಮಗಿಲ್ಲವೈ ॥ ೬ ॥ ಬಾಲ ನೀನರಿಯೆ ಲಜ್ಜೆಯುಲಿ ಬಾಯಿಗೆ ಬಂದ ವಚನವ । ಹೇಳಿ ಹಿಂದೊಂದು ಮಂಗ ॥ ಬಾಲವ ಸುಡಿಸಿಪೋದವನಂಥ । ಕಾಲ ಬಪ್ಪುದು ತಪ್ಪದು ॥ ೭ ॥ ಕೇಳಲಿಲ್ಲವೆ ಬಂದ ಕಪಿಯ ಪೋತಗಳೆಲ್ಲ । ಬಾಲಸುಡುಕ ನೀನೆಂದು ॥ ಆಲಿ ಬೊಬ್ಬಿರಿದಟ್ಟಿ ಬದಲು ಬಂದವ ನಮ್ಮ । ಬಾಲವ ಕೆಣಕಿ ನೋಡ್ಕೆ ॥ ೮ ॥ ಎಷ್ಟು ನೀ ಚಪಲತ್ವ ಕಲಿತೆಯಾದರು ನಿನ್ನ । ಹುಟ್ಟು ಮರ್ಕಟನೆಂಬರು ॥ ಸೃಷ್ಟೀಶ ನಿನ್ನೊಳೆಂದಂತರಂಗದ ಮಾತ । ಕೊಟ್ಟು ನೀ ನಡೆ ಸುಮ್ಮನೆ ॥ ೯ ॥ ಇಷ್ಟು ನೀ ಪಾರುಪತ್ಯವ ಮಾಡಿದರು ಧೊರೆ । ಯಿಟ್ಟ ಚಾರಕನಲ್ಲವೆ ॥ ತುಟ್ಟತುದಿಯ ಮಾತಿದೀಗ ರಾವಣನೆಂಬ । ಭ್ರಷ್ಟನಾರಯ್ಯ ಹೇಳು ॥ ೧೦ ॥

Scanned by CamScanner

ರಾಗ ಶಂಕರಾಭರಣ ಅಷ್ಟತಾಳ

ಕಂಡೆಯು । ಕಡುವೀರ ರಾವಣನ ನೀ । ಕಂಡೆಯು ॥ ಪ ॥ ಕಂಡೆಯು
ಕಪಿ ಕಡು ಜಾಣ । ಮಾ । ರ್ತಾಂಡಪ್ರಕಾಶ ಪ್ರವೀಣ । ಸುಪ್ರ । ಚಂಡ
ನಿರತಪಂಚಬಾಣ ॥ ಅಖಿ । ಳಾಂಡಕೋಟಿ ಬ್ರ । ಹ್ಮಾಂಡನಾಯಕ ಶತ್ರು ।
ಖಂಡನ ರಿಪುಗಜ । ಗಂಡಭೇರುಂಡನ ॥ ಕಂಡೆಯು ॥ ೧ ॥ ಸಂಗರವಿಜಯ
ವಿಹಾರ । ಶಿವ । ಲಿಂಗಪೂಜೆಯಲಿ ವಿಸ್ತಾರ । ಚತು । ರಂಗ ವೇದದ ಸದ್ವಿ
ಚಾರ ॥ ಕರು । ಣಂಗಳಿಂದಖಿಳ ಲೋ । ಕಂಗಳನಾಳ್ವ ಉ । ತ್ತುಂಗ
ಬಲಾಢ್ಯ ಶ್ರೀ । ಮಂಗಳ ಕಾಂತಿಯ ॥ ಕಂಡೆಯು ॥ ೨ ॥ ಶಿವನಿಂದಾಯು
ಷ್ಯವ ಪಡೆದ । ಮತ್ತೆ । ದಿವಿಜರೆಲ್ಲರನಟ್ಟಿ ಹಿಡಿದ । ಸೊಕ್ಕಿ । ದವರ ತಗ್ಗಿಸಿ
ಬಾಯ ಹೊಡೆದ ॥ ಜನ । ನಿವಹವಚ್ಚರಿಗೊಳ । ಲವನಿಜೆಯನು ಬಂಧ ।
ನವ ಮಾಡುತೊಡ್ಡೋಲಗವನಿತ್ತು ಕುಳಿತನ ॥ ಕಂಡೆಯು ॥ ೩ ॥

ಭಾಮಿನಿ

ಈತನೇ ದಶಕಂಠನಾ ರಘು । ನಾಥನಿಲ್ಲದ ವೇಳೆಯಲಿ ಭೂ । ಜಾತೆ
ಯನು ಕದ್ದೊಯ್ವ ಸಮಯದಿ ತಡೆದ ಖಗಪತಿಯ ॥ ಘಾತಕವ ಸೆರೆ ಮಾಡಿ
ಕೊಂದಾ । ಪಾತಕನ ನೋಡಿದರೆ ದೋಷದ । ರೀತಿಗಿದು ಪೊನೆಯೆನುತ
ತನ್ನೊಳು ಮಾತನಾಡಿದನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕೋಪ ನಿಮಗೇಕಿನಿತು ಸರಿಸ । ಲ್ಲಾಪವೇ ನಾವೀ ನಿಶಾಚರ । ರೂಪಿ
ನವರುಂಟಾಗಿ ಕೇಳಿದೆ । ವೀ ಪರಿಯೊಳು ॥ ೧ ॥ ಆ ಪರಂತಪ ಬಲಿಯ
ಭವನದ । ಕೈಪರೆಯ ನಾರಿಯರ ವಚನಾ । ಳಾಪಹಾಸ್ಯದ ಭಿಕ್ಷದವನೀ ।
ಪಾಪಿಯಹುದೆ ॥ ೨ ॥ ಘನಪರಾಕ್ರಮಿ ಕಾರ್ತವೀರ್ಯಾ । ರ್ಜುನನೊಡನೆ
ಸಲೆ ಮತ್ಸರಿಸಿ ಸೆರೆ । ಮನೆಯೊಳಗೆ ಕುರಿಯಂತೆ ಸಿಲುಕಿದ । ದನುಜನಿವನೆ ॥
॥ ೩ ॥ ವನಿತೆ ವೇದಾವತಿಯ ಶಾಪಕೆ । ತನುವ ತೆತ್ತವನೀತನಲ್ಲಲೆ । ಮನದ
ಭಯ ನಿಮಗೇಕೆ ತಿಳುಹಿಸಿ । ರೆನಗೆ ಪರಿಯ ॥ ೪ ॥ ತೋಳ ದರ್ಪದಲುಬ್ಬಿ
ವಾಲಿಯ । ಬಾಲಕನ ಬಚ್ಚಣೆಯ ತೊಟ್ಟಿಲ । ಕಾಲ ದೆಸೆಯಲಿ ಕಟ್ಟುವಡೆ
ದಿಹ । ಖೂಳನಲ್ಲೈ ॥ ೫ ॥ ಶೂಲಿಯಲಿ ಗರ್ವಿಸಿ ಮಹೀಧರ । ಮೂಲ
ದಲಿ ಕೈಸಿಕ್ಕಿ ನಾಯೋ । ಲೂಳಿದವ ತಾನೀತನಲ್ಲವೆ । ಹೇಳಿರಯ್ಯ ॥ ೬ ॥
ಜನಕಜೆಯ ವೈವಾಹದಲಿ ಶಿವ । ಧನುವಿನಲಿ ನರಿ ಸಿಕ್ಕು ಸಿಕ್ಕಿದ । ಶುನಕ
ತಾನಿವನಲ್ಲವೇ ಸುಡಿ । ಘನತೆಗಳನು ॥ ೭ ॥

ಭಾಮಿನಿ

ಆಗಲಾಗದೆ ಮಾಣಲಿವನೊಡ । ನಾ ಗಭೀರಪರಾಕ್ರಮರು ಹೇ ।
ಳ್ದಾಗಮವನಿವಗೆಂಬೆ ಮಿಕ್ಕಿನ ಮಾತದೇಕೆಮಗೆ ॥ ರೋಗಿಗೌಷಧ ಸೊಗಸೆ
ಹಿತಕರ । ವಾಗಿರಲು ನಮ್ಮುಕುತಿಗಳು ಕಿವಿ । ದಾಗಿಸುವೆವಾವೊಮ್ಮೆ
ಕೇಳಲಿ ಕೇಳದಿರಲೆಂದ ॥ ೧ ॥

ರಾಗ ಸವಾಯ್ ಏಕತಾಳ

ಏನಪ್ಪ ರಾವಣೇಂದ್ರ । ನೀನಾ ಜಾನಕಿಯನ್ನು । ಕಾಣದಂತೆ ಕದ್ದು
ತರಬಹುದೇನಮ್ಮಾ ॥ ತಾನಾಗಿ ರಾಮಚಂದ್ರ । ಸೇನೆಯ ಕೂಡಿಕೊಂಡು
ನೀನಿದ್ದ ಬಳಿಗೆ ಬಂದ ಕಾಣಮ್ಮಾ ॥ ೧ ॥ ನಿನ್ನ ಬಳಿಗೆ ರಾಮ । ನೆನ್ನ ಕಳುಹಿ
ಕೊಟ್ಟ । ನಿನ್ನಾದ್ರು ಸೀತೆಯ ಬಿಡಹೇಳಮ್ಮಾ ॥ ತನ್ನಿಂದ ತಪ್ಪಿತೆಂದು ।
ಹೊನ್ನ ಕಾಣಿಕೆ ಕೊಟ್ಟು । ಚೆನ್ನಾಗಿ ಬೆನ್ನ ಮರೆಹೊಕ್ಕು ಬಾಳಮ್ಮಾ ॥ ೨ ॥
ಏತಕ್ಕೆ ಛಲ ರಘು । ನಾಥ ಮಾನವನಲ್ಲ । ವಾತ ನಾರಾಯಣಸ್ವಾಮಿ
ಕಾಣಮ್ಮಾ ॥ ಸೀತೆಯು ಲಕ್ಷ್ಮಿ ಮಹ । ಶೇಷ ಲಕ್ಷ್ಮಣ ಸಹ । ಭೂತಳ
ದೊಳಗವತರಿಸಿದರಮ್ಮಾ ॥ ೩ ॥ ಮಂಡೋದರಿಯು ಬಹಳ । ಮಕ್ಕಳ
ಹೆತ್ತಳೆಂದು । ಕಂಡವರ ಬಾಯ್ತುತ್ತು ಮಾಡಬೇಡಮ್ಮಾ ॥ ಕೊಂಡೆಯದ
ಮಾತ ಕೇಳಿ । ಕೊಲಿಸದಿರು ಜಾತಿಯ । ದಿಂಡತನದಿ ಸಾಯಲೇಕೆ
ನೋಡಮ್ಮಾ ॥ ೪ ॥ ರುಂಡಮಾಲೆಯನಿಟ್ಟು । ಕೊಂಡಂಥ ಶಿವ ಕೊಟ್ಟು ।
ದುಂಡು ಸೌಖ್ಯದೊಳಿರಬಾರದೇನಮ್ಮಾ ॥ ಚಾಂಡಾಲತನದಿ ಸಿಕ್ಕಿ । ತಂಡ
ತಂಡದೊಳಿಪ್ಪ । ಹೆಂಡಿರ ಓಲೆಯ ಕಳಚಬೇಡಮ್ಮಾ ॥ ೫ ॥ ಈರೇಳು ಲೋಕ
ದಲ್ಲಿ । ಪಾರುಪತ್ಯವನ್ನು ಮಾಡಿ । ಪಾರಾಗಿ ಕೆಟ್ಟುಹೋಗಬೇಡ ಕಾಣಮ್ಮಾ ॥
ಭೂರಿ ಸಂಪತ್ತು ತುಂಬಿ । ಸೇರಿಕೊಂಡಿಪ್ಪ ಲಂಕೆ । ಊರೆಲ್ಲ ಹಾಳುಮಾಡ
ಬೇಡ ಕಾಣಮ್ಮಾ ॥ ೬ ॥ ಶೂರುಪನಖಿ ಹುಚ್ಚು । ಮೂಳಿಯ ಮಾತ ಕೇಳಿ ।
ವೀರ ಖರದೂಷಣರೇನಾದರಮ್ಮಾ ॥ ಸಾರವ ನೋಡಿಕೊಂಡು । ಸಕಲವ
ತಿಳಿದು ದೊಡ್ಡ । ಮಾರಿಯ ಬಾಯ ಹೊಕ್ಕು ಸಾಯದಿರಮ್ಮಾ ॥ ೭ ॥

ರಾಗ ಭೈರವಿ ಏಕತಾಳ

ಇನಿತೆಂದಾ ನುಡಿ ಕೇಳಿ । ಆಗ । ದನುಜನು ರೋಷವ ತಾಳಿ ॥ ವನ
ಚರನನು ಹೊಯ್ಯೆಂದ । ಅಂಗ । ದನ ಮುತ್ತಿತು ಖಳವೃಂದ ॥ ೧ ॥ ಗಜ
ರಥ ತುರಗಗಳಿಂದಾ । ಖಳ । ವ್ರಜಭಟರುಗಳೈತಂದ ॥ ಭುಜಬಲಗಳ
ತೋರೆಂದಾ । ಸುರ । ಪಜನ ಕುಮಾರಕ ಕೊಂದ ॥ ೨ ॥ ಈಟಿಯವರ

Scanned by CamScanner

ಸದೆಬಡಿದಾ । ಬಿ । ಲ್ಲಾಟದವರ ಬೆನ್ನೊಡೆದ ॥ ಮೀಟಿ ಗಜದ ಕಾಲ್ವಿಡಿದ । ಕೊಂದು । ಕೋಟೆಯ ಹೊರಗೆ ಬಿಸಾಡಿದ ॥ ೩ ॥ ಬೀಳುವ ಗಜತುರಗವನು । ರಾಮು । ಕೇಳಿದ ಬಲು ಬೊಬ್ಬೆಯನು ॥ ಕಾಳಗವಾಯ್ತಂಗದಗೆ । ಶಿಶು । ತಾಳುವುದೆಂತೀ ಬಗೆಗೆ ॥ ೪ ॥ ಮರುತಾತ್ಮಜ ನೀ ಬೇಗ । ಹೋಗಿ । ಕರೆತಾರಂಗದನೀಗ ॥ ತೆರಳೆಂದೆನೆ ಶರಣೆಂದ । ಬಲು । ತರ ರೌದ್ರದಿ ನಡೆತಂದ ॥ ೫ ॥

ಕಂದ

ಕೈಮುರ ಗಿರಿಯಿಂದವರಂ । ಹೊಯ್ದೊರಗಿಸುವಂಗದನನು ಕಂಡಾಕ್ಷಣದಿಂ ॥ ಕೈತಡೆವುತ ಮರುಳೆನ್ನುತ । ಬೈವುತ ಹನುಮಂತ ಪೇಳ್ದ ತಾರಾಸುತಗಂ ॥ ೧ ॥

ರಾಗ ಜಹಜು ಏಕತಾಳ

ಏನವತಾರ ವಾಲಿನಂದನ । ಇಂಥ । ಆನೆ ಕುದುರೆಯಿದ್ದ ಸೇನೆ ಕೊಲುವುದಿದು ॥ ಏನವತಾರ ॥ ಪ ॥ ನೀತಿ ಪೇಳ್ವರೆ ನೀನು ಬಂದರೆ । ಇಂತು । ಘಾತಕ ರಕ್ಕಸರ ಕೊಂದರೆ । ರಘು । ನಾಥನು ಸಹ ಭಾನು । ಜಾತಕೋರ್ಪಿಸುವರು ॥ ಏನವತಾರ ॥ ೧ ॥ ಪೋಗುವ ಶ್ರೀರಾಮನಲ್ಲಿಗೆ । ನಾಳೆ । ಹೇಗೂ ಬರುವುದುಂಟು ಇಲ್ಲಿಗೆ । ಮುಂದೆ । ರಾಘವನಿದಿರುತೋ । ರಾಗ ನಿನ್ನಯ ಶೌರ್ಯ ॥ ಏನವತಾರ ॥ ೨ ॥

ಕಂದ

ಎಂದಾ ಮಾರುತನಂದನ । ಕೊಂದಾಟವ ನಿಲಿಸೆ ದನುಜನಿದಿರೊಳು ನಿಂದುಂ ॥ ಮುಂದಿನ್ನಾಗುವ ಕಾರ್ಯದ । ಹೊಂದಿಕೆಯನು ಪೇಳ್ದನಾಗ ರಾವಣನೊಡನಂ ॥ ೧ ॥

ರಾಗ ಆನಂದಭೈರವಿ ಏಕತಾಳ

ಏನಯ್ಯಾ ನಿನ್ನಂತರಂಗ । ಮಾನವಲ್ಲದೀ ಪ್ರಸಂಗ । ವೇನಯ್ಯಾ । ಮುಂದಿ । ನ್ನೇನಯ್ಯಾ ॥ ೧ ॥ ಸೃಷ್ಟಿಜಾತೆಯ ನೀ ತಂದು । ಕೊಟ್ಟು ರಾಮಚಂದ್ರನ ಕೂಡಿ । ಬಾಳಿಂತು । ಕೆಡಲು । ಬೇಡಂತು ॥ ೨ ॥ ಜಗದ ದೈವದ ಕೂಡೆ ಇಂತು । ಹಗೆಯ ಬೆಳೆಸಿಕೊಂಡರೆಂತು । ಇರುವುದು । ಕೀರ್ತಿ । ಬರುವುದು ॥ ೩ ॥ ತಮ್ಮನ ನೀ ಕೂಡಿಕೊಂಡು । ಸುಮ್ಮಾನದಿಂದಲೆ ಸುಖದೊ । ಳಿರುವೆಯ । ರಣಕೆ । ಬರುವೆಯ ॥ ೪ ॥ ಕಡೆಗೆ ನೀನೆಂಬ ಮಾತೇನು । ಒಡೆಯನ ಪಾದದೊಳೇನ । ಹೇಳ್ವೆನು । ಪೇಳು । ಕೇಳ್ವೆನು ॥ ೫ ॥

ರಾಗ ವರಾಳಿ ಏಕತಾಳ

ಆಯಿತೇ ನಿನ್ನ ಮಾತು ಹೇಳಿ । ಮರ್ಕಟ ನಿವಾಳೀ । ಆಯಿತೇ ನಿನ್ನ ಮಾತು ಹೇಳಿ ॥ ಪ ॥ ಭೂತಳ ಕೆಳಕ್ಕೆ ಸರಿದರೂ । ಪಾತಾಳ ಮೆಲಕ್ಕೆ ನೆಗೆದರೂ ॥ ಸೀತೆಯ ನಾ ಬಿಟ್ಟುಕೊಡುವ । ಮಾತುಂಟೇನೊ ಛೀ ಛೀ ಮರುಳೆ ॥ ಆಯಿತೇ ॥ ೧ ॥ ಆ ನೀರನಿಧಿ ಬತ್ತಿಹೋದರೇನು । ಭಾನು ತಣ್ಣಗಾದರಿನ್ನೇನು ॥ ಪ್ರಾಣವಳಿದು ಹೋಗದನಕ । ಕಾಣಿಸಿ ಶರಣೆಂಬುದುಂಟೆ ॥ ಆಯಿತೇ ॥ ೨ ॥ ಇರುಳಾಧಿಪತಿಯು ಮೂಡಿದರೇನು । ಗರಳೆದ್ದು ಮಾತನಾಡಿದರೇನು ॥ ಶರೀರವಿದು ಬಂದು ರಾಮಗೆ । ಶರಣೆಂದು ಹೇಳುವುದುಂಟೆ ॥ ಆಯಿತೇ ॥ ೩ ॥

ವಾರ್ಧಿಕ

ರಘುವರನ ಸೇವಕರ ಹಿತಕರದ ವಚನವನು । ಬಗೆಗೊಳದೆ ಜರೆದು ಕಳುಹಿಸಿದನವರಿಬ್ಬರನು । ಪಗಲೊಡೆಯವಂಶವಾರಿಧಿಚಂದ್ರನಿದಿರು ಕೈಮುಗಿದೆಂದರಾ ಪರಿಯನು ॥ ವಿಗಡ ರಾವಣ ಕಳುಹಿದುತ್ತರಂ ತಿಳುಹಲಾ । ಸಗರವಂಶಜ ನುಡಿದನಿನ್ನೇನು ನಿಮ್ಮ ಹವ । ಣೆಗೆ ತಕ್ಕ ಕಾರ್ಯಮಂ ವರ್ತಿಸುವುದೆನಲು ಲಗ್ಗೆಗೆ ಪಡೆದರಪ್ಪಣೆಯನು ॥ ೧ ॥

ರಾಗ ಮುಖಾರಿ ಏಕತಾಳ

ಮುತ್ತಿದರಾ ದುರ್ಗವ । ವನಚರರೆಲ್ಲ । ಹತ್ತಿದರಾ ದುರ್ಗವ ॥ ಮುತ್ತಿದ ॥ ಪ ॥ ಕೊತ್ತಳಗಳ ಮುರಿ । ವುತ್ತೊಡನೊಡನೆ ಭ । ಟೋತ್ತಮರುಡುಗುತ । ಸುತ್ತಲು ಕವಿದು ॥ ಮುತ್ತಿದ ॥ ೧ ॥ ಕತ್ತಿ ಕುಂತಗಳೊ । ಳೊತ್ತಿ ತಿವಿಯೆ ಬಿಸಿ । ನೆತ್ತರ ಕಾರುತ । ಲತ್ತ ಮರ್ಕಟರು ॥ ಮುತ್ತಿದ ॥ ೨ ॥ ಕೋಟೆಯ ಒಳಗಣ । ಈಟಿಯ ಗಾಯವ । ಸಾಟಿಯ ಮಾಡದ । ಸೂಟಿಯ ಭಟರು ॥ ಮುತ್ತಿದ ॥ ೩ ॥ ಚೂರಿಯೊಳಿಡಿದರು । ಭಾರಿಯ ಪೆಟ್ಟಿನ । ತೋರಿಕೆಗೆಣಿಸದೆ । ವಾರಣದಿಂದ ॥ ಮುತ್ತಿದ ॥ ೪ ॥ ಬಾಣದ ತಗಲಿಗೆ । ಶೋಣಿತ ಸುರಿಯಲು । ಕಾಣಿಸಿಕೊಳ್ಳದೆ । ತ್ರಾಣಿಗಳೆಂದು ॥ ಮುತ್ತಿದ ॥ ೫ ॥

ಭಾಮಿನಿ

ಮುರಿದ ಕೈಕಾಲುಗಳ ಕಪಿಗಳ । ಹರಿದ ಹೊಟ್ಟೆಯ ಕರುಳುಗಳ ಜೋ । ಲ್ವರಿದ ಮೂಗಿನ ಸಿಗಿದ ತುಟಿಗಳ ಸುರಿವ ರಕುತಗಳ ॥ ಮೊರೆವ ಭೇರಿ ಡೆಮಾಮಿ ವಾದ್ಯದ । ಭರಕೆ ನೆಲ ಬಾಯ್ಬಿಟ್ಟುದೋ ಎನೆ । ಮುರಿವ ಲಗ್ಗೆಯ ಕಪಿಕದಂಬಕ ಬಂದುದೊಳಸರಿದು ॥ ೧ ॥

Scanned by CamScanner

ರಾಗ ಶಂಕರಾಭರಣ ಅಷ್ಟತಾಳ

ಹೋಯಿತು ಲಂಕೆ ರಾವಣಗೆ । ವಶ । ವಾಯಿತು ರಾಮಚಂದ್ರನಿಗೆ । ದಾಯದೋರಿದುದಮರರಿಗೆ । ಎಂಬಂ । ತಾಯಿತೊಂದೇ ಕ್ಷಣದೊಳಗೆ ॥ ಪೆಟ್ಟಿ । ಗಾಯಲಾರದೆ ದಂಡು । ಬೀಯುವಾದುದ ಕಂಡು । ಖೋಯೆಂದು ಭರದಿ ಪ । ಲಾಯನ ಗೈದರು ॥ ಹೋಯಿತು ॥ ೧ ॥ ಸುಂಡಿಲ ಮುರಿದರಾನೆಗಳ । ಕಲ್ಲು । ಗುಂಡಿನಿಂದಿಟ್ಟರಶ್ವಗಳ । ತಂಡ ತಂಡದ ಖಳರುಗಳ । ಕಡಿ । ಮಂಡೆಯನೊಡೆದ ಹುಬ್ಬುಗಳ ॥ ಪೂರ್ಣ । ಕಂಡು ರಾವಣನಾಚಿ । ಕೊಂಡು ಹೋಯಿತು ನಮ್ಮ । ದಂಡು ಎಂದೆನುತಲೆ । ಮಂಡೋದರಿಗೆ ಪೇಳ್ದ ॥ ಹೋಯಿತು ॥ ೨ ॥ ತೊಂಭತ್ತುಕೋಟಿ ದಾನವರು । ಇವರ । ಡೊಂಬಿಗೆ ನಿಲಲಾರದವರು । ಬೆಂಬಿಡದಲ್ಲಿ ಸತ್ತವರು । ಎಲ್ಲ । ಕಂಬಿಟ್ಟರಲ್ಲಿ ನಿಂತವರು ॥ ಎಳೆ । ಕೊಂಬಡೀ ಸಮಯವಿ । ದೆಂಬುದರೊಳಗೆಲ್ಲ । ಜಾಂಬವಾದಿಗಳ ಕ । ದಂಬ ಮುತ್ತಿದರಾಗ ॥ ಹೋಯಿತು ॥ ೩ ॥ ಅರಮನೆಯೊಳು ಪೊಕ್ಕು ಕಂಡ । ಕಪಿ । ಪರಿವಾರವನು ದಶತುಂಡ । ಭರದಿ ಖಡ್ಗವನು ಕೈಗೊಂಡ । ಬಡಿ । ದುರುಳಿಸೆ ವಾನರ ರುಂಡ ॥ ಹಗ । ಲಿರುಳಾಯಿತೋ ಮಂಡೋ । ದರಿ ಪುಣ್ಯದೊಳಗೆಂಬ । ತೆರನ ಕಾಣಿಸಿದುದೊಂ । ದರೆ ಘಳಿಗೆಯೊಳೆಲ್ಲ ॥ ಹೋಯಿತು ॥ ೪ ॥ ಕೊಬ್ಬಿದ ರಾಮಸೇನೆಯನು । ಕಾಣು । ತೊಬ್ಬನೋಡಿಸಿದ ರಾವಣನು । ಹಬ್ಬಿಸಿ ಖಳ ಸೇನೆಗಳನು । ಬಲು । ಬೊಬ್ಬಿಟ್ಟು ಹರಿಕರಿಗಳನು ॥ ಅಲ್ಲಿಂ । ದೆಬ್ಬಿದ ರಾಮನ ಪಾಳ್ಯವೆಂಬುದರೊಳ । ಗಬ್ಜಬಾಂಧವ ಪಶ್ಚಿ । ಮಾಬ್ಧಿಗಾದುದು ಬಿಂಬ ॥ ಹೋಯಿತು ॥ ೫ ॥

ವಾರ್ಧಿಕ

ಓಡಿಸಿದನಾ ದಿವಸ ಬಳಿಕ ದುರ್ಗವ ಸಜ್ಜು । ಗೂಡಿಸಿದ ಮಾಲ್ಯವಂತನ ಮಾತ ಕೇಳದೆ ವಿ । ಭಾಡಿಸಿದ ಜಾನಕಿಯ ಮುಂದೆ ಮಾಯಾಶಿರವ ರೂಢಿಸಿದ ಕಪಟದಿಂದ ॥ ಮಾಡಿಸಿದನಸುರ ವಿದ್ಯುದ್ಯುಮ್ನನಿಂದಲತಿ । ಜೋಡಿಸಿದ ರಾಘವನ ಶಿರದಂತೆ ಬಳಿಕ ಕುಣಿ । ದಾಡಿಸಿದ ಸುವ್ರತೆಯ ಬಳಿಗೈದಿ ಬಗೆಬಗೆಯ ನೋಡಿಸಿದ ಜನಕಸುತೆಗೆ ॥ ೧ ॥

ರಾಗ ಮೋಹನ ಅಷ್ಟತಾಳ

ನೋಡು ಸೀತೆ । ರಾಮನ ಶಿರವ । ನೋಡು ಸೀತೆ ॥ ಪ ॥ ಓಡಿಹೋದವರೊಂದು । ಗೂಡಿ ಸಂಗರದೊಳೆ । ಚ್ಚಾಡಿ ತರಿದು ತುಂಡು ।

ಮಾಡಿದ ಶಿರವ ॥ ನೋಡು ॥ ಅ ॥ ಥಳಥಳಿಸುವ ಮೊಗ । ಸುಳಿಗುರುಳಿನ ಸೊಗ । ಸಲರಂಬನ ಧನು । ಪೊಳೆವ ಪುರ್ಬುಗಳ ॥ ನೋಡು ॥ ೧ ॥ ಕನ್ನಡಿ ಕದಪಿನ । ಚಿನ್ನದ ರೇಖೆಯ । ಸನ್ನೆಗೊಳಿಪ ಸೋಗೆ । ಗಣ್ಣಿನ ಚೆಲುವ ॥ ನೋಡ್ಕು ॥ ೨ ॥ ಸಂಪಿಗೆ ಬಿರಿ ಮುಗು । ಳಂ ಪೋಲ್ವ ನಾಸದ । ಸೊಂಪಿನ ತುಟಿಗಳ । ಕೆಂಪಿನ ಸೊಬಗ ॥ ನೋಡು ॥ ೩ ॥

ರಾಗ ಸಾರಂಗ ಅಷ್ಟತಾಳ

ದೃಢವಾಯಿತೇನೆ ಸೀತೆ । ರಾವಣ ಜಗ । ದೊಡೆಯನೆಂದೆಂಬ ಮಾತು ॥ ತೊಡರಿಲ್ಲವಲ್ಲ ರಾಕ್ಷಸನ ಚಿತ್ತದೊಳಿದ್ದ । ಕಡಹ ತೀರಿಸಿ ಕೊಟ್ಟು ನಡೆಸಿಕೊಂಬುದಕಿಷ್ಟು ॥ ದೃಢ ॥ ೧ ॥ ಸಿಂಹನ ಗವಿಯ ಪೊಕ್ಕು । ಸಿಂಗಳೀಕವು । ಸಂಹರಿಸಲು ಬಲ್ಲುದೆ ॥ ಬ್ರಹ್ಮಾದಿ ಸುರರಿಂದ ಪೂಜ್ಯತ್ವ ದಶಕಂಠ ! ನಿಮ್ಮಾತ್ರನಿದಿರಾಗುವನೆ ಏತಕಿದು ಭ್ರಮೆ ॥ ದೃಢ ॥ ೨ ॥ ಗರುಡನಿದ್ದೂರೊಳಗೆ । ಗಂಭೀರವಾ । ದುರಗನುತ್ಸಾಹವುಂಟೆ ॥ ತಿರುಗಿ ರಾಘವ ನಿನ್ನನೊಯ್ವನೆಂಬಾಸೆಗೆ । ಬರಿದೆ ನೀ ಮರುಳಾದೆ ಕಾಂತೆ ಸದ್ಗುಣವಂತೆ ॥ ದೃಢ ॥ ೩ ॥ ಕಾಯದ ಸುಖವಿಲ್ಲದೆ । ಸುಮ್ಮನೆ ನಿನ್ನ । ಪ್ರಾಯವ ದಂಡಿಸಿದೆ ॥ ಬಾ ಇನ್ನಾದರು ಬಲ್ಲಿದವನ ಮನದೊಳಿದ್ದ । ದಾಯವ ಸಲಿಸು ಪಟ್ಟದ ರಾಣಿಯಾಗುವೆ ॥ ದೃಢ ॥ ೪ ॥

ವಾರ್ಧಿಕ

ಈ ತೆರದ ಮಾಯದಭಿರಂಜನೆಯ ಶಿರವ ಭೂ । ಜಾತೆ ಕಂಡಂಜಿ ಮೂರ್ಛಿತೆಯಾಗಿ ಮನಮರುಗಿ । ಧಾತುಗೆಟ್ಟಂಗನೆಯ ಮುಖತುಹಿನಕರ ರಾಹು ಸೋಕಿದಂತಾಯ್ತು ಕ್ಷಣಕೆ ॥ ಘಾತಕದ ತಲೆಯನೇನೆಂದರಿಯಳಬಲೆ ರಘು । ನಾಥನೇ ನಿಜವೆಂದು ಮುಖ ನಾಸ ನಯನಗಳ । ನೋತು ತಡವರಿಸಿ ಮುದ್ದಿಸುತೊಡನೆ ಮುಂಡಾಡಿ ಪ್ರೀತಿ ಬಿಡದಿಂತೆಂದಳು ॥ ೧ ॥

ರಾಗ ಘಂಟಾರವ ತೋಡಿ ಆದಿತಾಳ

ಮತ್ಪ್ರಾಣೇಶ ಧಾರಿಣೀಶ । ಸುಪ್ರತಾಪನೆ ॥ ಅಪ್ರಮೇಯಾನಂದಕಾಯ । ವಿಪ್ರಪ್ರಿಯ ರಾಘವಾಯ ॥ ೧ ॥ ದುರ್ಜನಕುಲವಿಘಾತ । ಸಜ್ಜನಪ್ರೀತ ॥ ನಿರ್ಜರಾಗಣವಂದಿತ । ಗರ್ಜನ ಸಿಂಧುಸಮೇತ ॥ ೨ ॥ ಅಂಗಜಕೋಟಿಲಾವಣ್ಯ । ಆಶ್ರಿತವರೇಣ್ಯ ॥ ತುಂಗವಿಕ್ರಮ ಕಾರುಣ್ಯ । ಸಂಗೀತಲೋಲಾಗ್ರಗಣ್ಯ ॥ ೩ ॥

Scanned by CamScanner

ರಾಗ ಕೇದಾರಗೌಳಿ ಅಷ್ಟತಾಳ

ನೋಡಿದೆಯ ನೀನು ಸರಮೆ ಪೂರ್ವದಲಿ ನಾ । ಮಾಡಿದ ಸುಕೃತಂಗಳ ॥ ನಾಡ ದೈವಗಳ ನಂಬಿದವರ್ಗೆ ಶಿವ ದಯ । ಮಾಡುವ ವಿಕೃತಂಗಳ ॥ ॥೧॥ ಅಣ್ಣತಮ್ಮರು ಬಂಧುಬಳಗದಾಸೆಯ ಬಿಟ್ಟು । ಎನ್ನವರಡಿಯ ಕಾದೆ ॥ ಪುಣ್ಯದ ಫಲವಿಂತು ಮಾಡಿತು ಕಾರ್ಯವ । ಕಣ್ಣಾರೆ ಕಂಡೆಯಲ್ಲ ॥ ೨ ॥ ಜಗತಿಯೊಳೆಲ್ಲಾದರಿನ್ನಿಂಥ ಚೆಲುವಿನ । ಮೊಗವುಳ್ಳ ಪುರುಷರುಂಟೆ ॥ ಬಗೆಯಲಿನ್ನೆಷ್ಟು ಹೇಳಿದರೇನು ತ್ರಿಜಟೆ ಸಾ । ವಿಗೆ ದಾರಿ ತೋರೆನಗೆ ॥ ೩ ॥ ಇಂತೆಂದು ಸೀತೆ ಯೋಚಿಸಿದಂಥ ಹದನವ । ನಂತರಂಗದಲಿ ಪೋಗಿ ॥ ನಿಂತುಕೊಂಡಾ ವಿದ್ಯುಜ್ಜಿಹ್ವ ಪೇಳಿದ ಕಾಮು । ಭ್ರಾಂತನಾದಸುರೇಶಗೆ ॥ ೪ ॥

ವಚನ

ಇತ್ತಲಾಗಿ ಸರಮೆ ತ್ರಿಜಟೆಯರು ಕೌಳಿಕದ ಗಳರೇಖೆಯ ನೋಡಿ ಸೀತಾದೇವಿಯೊಡನೆ ಏನೆಂದರು ಎಂದರೆ—

ರಾಗ ರೇಗುಪ್ತಿ ಏಕತಾಳ

ನಿತ್ಯಮಂಗಲೆ ನೀನು । ನಿರತಶಾಶ್ವತ ರಾಮು । ಸತ್ತು ಹುಟ್ಟುವುದೆಂಬ ಸಂಸಾರವೇನೆ ॥ ನಿತ್ಯ ॥ ೧ ॥ ಅತ್ತ ಬಿಸಾಡಸುರ । ಕೃತ್ರಿಮವಿದನು ನೀ । ನೆತ್ತಿ ದುಃಖಿಸುವರೆ । ಮತ್ತೇಭಗಮನೆ ॥ ನಿತ್ಯ ॥ ೨ ॥ ಗಳದ ರೇಖೆಯ ಕಂಡು । ತಿಳಿದಳಂಜಿಕೆಗೊಂಡು । ಇಳೆಗೆ ಬಿಸಾಡಲಂದು । ಆಶ್ಚರ್ಯವೆಂದು ॥ ನಿತ್ಯ ॥ ೩ ॥ ಅಳುತ ಶಾಪವನಿತ್ತ । ಳಿಂತು ರಾಮರ ಬಾಣ । ವಿಳುಹಲಿ ಧರಣಿಗಾ । ಶಿರ ಹತ್ತನೆಂದು ॥ ನಿತ್ಯ ॥ ೪ ॥

ವಾರ್ಧಿಕ

ಅರಸುಮಕ್ಕಳು ಕೇಳಿ ಮರುದಿವಸದುದಯದಲಿ । ಕರಿ ತುರಗ ರಥ ಪಾದಚಾರಿಗಳ ಸೈನ್ಯಮಂ । ನೆರಹಿ ಭೈರವಗೆ ನೂರ್ಮಡಿಯಾದ ರಕ್ಕಸರ ಪರಿವಾರಮಂ ಕೂಡಿಸಿ ॥ ಸುರಪಜಿತು ಸಕಲ ಪಡೆಗಳ ನೆರಹಿ ನಡೆತಂದು । ಧುರಕೆ ನಿಲಲಾರ್ಭಟಿಸೆ ಕಂಡು ವಾನರರು ತರ । ಹರಿಸುತಿರಲಿತ್ತ ರಾಮನ ಪಾಳ್ಯದೊಳು ವಿಭೀಷಣ ಕಾಣುತಿಂತೆಂದನು ॥ ೧ ॥

ರಾಗ ಭೈರವಿ ಝಂಪೆತಾಳ

ಅವಧರಿಸು ರಾಜೇಂದ್ರ । ನಾತನೇ ಶಕ್ರಜಿತು । ಭುವನದೊಳಗತಿ ಭಟನು । ಭುಜಬಲಾನ್ವಿತನು ॥ ೧ ॥ ಈತನಂಜಿಕೆಗಾಗಿ । ಈಶನಜ ಮೊದ

ಲಾಗಿ । ಶ್ವೇತಕುಂಜರರೂಢ । ಸೋತರುರೆ ಗಾಢ ॥ ೨ ॥ ಸಕಲ ದಿವಿಜಾದಿಗಳು । ಸೇವೆಯನು ಮಾಡುವರು । ಅಖಿಳ ರಾಕ್ಷಸರುಗಳು । ಆಳಾದರವರು ॥ ೩ ॥ ಈತನೊಬ್ಬನು ನಮಗೆ । ಸೋತನಾದರೆ ಕಡೆಗೆ । ಏತಕೂ ಬೇಡವರ । ವ್ರಾತಗಳ ಬವರ ॥ ೪ ॥ ಕುಂಭಕರ್ಣನಿಗೆಂತು । ಕಡೆಗು ನಿದ್ರಾ ಭ್ರಾಂತು । ಕಾಂಬೆ ಮಿಕ್ಕಾದವರ । ಡೊಂಬಿಗಳ ವಿವರ ॥ ೫ ॥

ರಾಗ ಪಂಚಾಗತಿ ಮಟ್ಟೆತಾಳ

ಎಂದು ರಾಮಚಂದ್ರನೊಡನೆ । ನಿಂದು ಬಿನ್ನವಿಸಲು ಗಡಣೆ । ಯಿಂದ ನೀಲ ಸಹಿತ ರವಿಜ । ಬಂದನಲ್ಲಿಗೆ ॥ ಒಂದು ಕಯ್ಯ ಶೈಲ ಮ । ತ್ತೊಂದು ಕಯ್ಯ ವೃಕ್ಷಗಳಲಿ । ವಂದಿಸುತ್ತ ರಾಮಭದ್ರ । ಗೆಂದನಿದಿರಲಿ ॥ ॥ ೧ ॥ ಇಳೆಯನೆಲ್ಲ ಮುದುಡಿ ಕಂಕು । ಳೊಳಗೆ ಧರಿಸ ಹೇಳು ಶರಧಿ । ಜಲವನೆಲ್ಲ ಕುಡಿದು ಕಾಲ । ನೆಳೆದು ತರುವೆವು ॥ ಲಲನೆಗಳ್ಳನಣುಗನೊಬ್ಬ । ಸುಲಭದೈತ್ಯನೊಡನೆ ಕಾದಿ । ಗೆಲುವ ಬಗೆಗೆ ಚಿಂತೆವೆ । ಗ್ಗಳಿಸಲಾದುದೆ ॥ ॥ ೨ ॥ ಕಳುಹಿ ನೋಡಿ ರಾಮಪಾದ । ದೊಲವಿನಿಂದಲಿಂದ್ರಜಿತುವ । ತಲೆಯ ತಂದು ಕೊಡುವೆನೆನುತ । ಲುಲಿವುತಂಗದ ॥ ಇಳಿದ ಭರವ ಕಂಡು ನೀಲ । ಸುಳಿದು ಬೊಬ್ಬಿಡುತ್ತಲಾಗ । ದಳವ ಬಿಟ್ಟನಂದು ಪಾಳ್ಯ । ಗಳ ವಿಲಾಸದಿ ॥ ೩ ॥ ಬೊಬ್ಬಿಡುತ್ತ ಬರುವ ಕಪಿಗ । ಳುಬ್ಬಟೆಯನು ಕಂಡು ಖಳರಿ । ಗೊಬ್ಬರೊಬ್ಬರಿದಿರು ನಿಂದ । ರಬ್ಬರಿಸುತಲೆ ॥ ಕೊಬ್ಬಿದಸುರ ಪಡೆಯು ಸಹಿತ । ಸರ್ಬವಾನರರನು ಗೆಲಿಯೆ । ಪರ್ಬಿತಮರಸೈನ್ಯ ರಣದ । ಹಬ್ಬವೆಸಗಿತು ॥ ೪ ॥

ದ್ವಿಪದಿ

ತರಣಿನಂದನಗೆ ತಾ ನಿಂದ ಶಕ್ರಜಿತು । ಪರಪ್ರಹಸ್ತಗೆ ನೀಲನೊಳು ಕಲಹವಾಯ್ತು ॥ ೧ ॥ ಕುಂಭನಿಗೆ ನಳನಾ ನಿಕುಂಭಗಂಗದನು । ಜಾಂಬವರಿಗಿದಿರಾದ ಧೂಮ್ರಲೋಚನನು ॥ ೨ ॥ ಶತಬಲಿಯು ದುರ್ಮುಖನು ಸೆಣಸಿದರು ಕಡೆಗೆ । ಪ್ರತಿಯಾದರಾ ಸುರಾಂತಕ ನರಾಂತಕಗೆ ॥ ೩ ॥ ಅತಿಕಾಯನಿದಿರಾದನಲ್ಲಿ ಲಕ್ಷ್ಮಣನ । ಖತಿಯಿಂದ ತಡೆದ ವೃಷಭ ಸುಪಾರ್ಶ್ವ ಖಳನ ॥ ॥ ೪ ॥ ಕನಲಿ ವಿಕ್ರಮದಿಂದ ಕಂಪ ನಡೆತಂದು । ಹನುಮಂತಗಿದಿರಾಗೆ ಮತ್ಸರದೊಳಂದು ॥ ೫ ॥ ವಜ್ರದಂಷ್ಟ್ರನ ಕೂಡೆ ಜಗಳ ಬೇಸತ್ತು । ವಜ್ರಧರನಂದನಗೆ ಒದಗಿತಾ ಮತ್ತು ॥ ೬ ॥ ಮಿತ್ರಘ್ನನೊಡನೆ ನಿಂದಾ ವಿಭೀಷಣನು । ಶತ್ರುತ್ವಮಂ ಬಳಸುತೊಡನೆ ಕಾದಿದನು ॥ ೭ ॥

Scanned by CamScanner

ರಾಗ ಭೈರವಿ ತ್ರಿವುಡೆತಾಳ

ಆಯಿತಾಗ । ಕಲಹಗ । ಳಾಯಿತಾಗ ॥ ಪ ॥ ರಾಯದಳ ರಾಕ್ಷಸರ ಪಾಳ್ಯದಿ । ಬಾಯ ಬೊಬ್ಬೆಯ ಕದನ ಕರ್ಕಶ ॥ ಆಯಿತಾಗ ॥ ಅ ॥ ಶರಧಿ ಮಥನದೊಳಂದು ಪುಟ್ಟಿದ । ತೆರೆಗೆ ನೂರ್ಮಡಿ ಹೆಚ್ಚಿತು । ಧರಿಸಲಾರದೆ ಭೂಮಿಭಾರವ । ಕರಿಕಮಠರೆದೆ ಚುಚ್ಚಿತು । ನೆರಿದು ನೋಡುವ ಸುರಸಮೂಹದ । ಕರಣಗಳ ಸೆರೆ ಬಿಚ್ಚಿತು । ಸರಳವೊನೆ ತರು ಗಿರಿಗಳಾಟದಿ । ಧರಣಿತಲೆ ನುಗ್ಗೊತ್ತಿತೀ ಪರಿ ॥ ಯಾಯಿತಾಗ ॥ ೧ ॥ ಬಾಣಗಳು ತಾಗಿದರೆ ಕಪಿಗಳು । ತ್ರಾಣದಿಂ ಪಲ್ಗಿರಿವುತ । ಆನಲಾರದೆ ಗಿರಿಯು ಬಡೆತಕೆ । ದಾನವರು ಭೋರ್ಗರೆವುತ । ಕಾಣುತುಭಯ ಬಲಂಗಳಲಿ ವೈ । ಶೋಣಿತದ ಮಳೆ ಸುರಿವುತ । ಕ್ಷೋಣಿಗತ್ಯಾಶ್ಚರ್ಯವೆನೆ ಬಲು । ಪ್ರಾಣಗಳ ಲಯ ಮಾಡುತೀ ಪರಿ ॥ ಯಾಯಿತಾಗ ॥ ೨ ॥

ರಾಗ ಪಂತುವರಾಳಿ ಅಷ್ಟತಾಳ

ಬಹಳ ಮಂದಿ ಲಯವಾಯಿತು । ರಘೂ । ದ್ವಹನ ಪಾಳ್ಯದಿ ಕಪಿ ದಾನವರೊಳಗೆ ॥ ಬಹಳ ॥ ಪ ॥ ಏಳರ್ಬುದವೆಣಿಸಿದರು ದಾನವರಲ್ಲಿ । ಪೇಳಲೇನಯ್ದು ಸಾವಿರ ಲಯವಾಯ್ತು ॥ ಕಾಲು ಕೈ ಮುರಿದಂಥವರ ಲೆಕ್ಕವನು ಮಾಡಿ । ಪಾಲು ಮಾಡುವರ್ಯಾರು ಪರಮಾತ್ಮ ಬಲ್ಲ ॥ ಬಹಳ ॥ ॥ ೧ ॥ ಕಲಿ ವಿಭೀಷಣನು ಮಿತ್ರಘ್ನ ರಾಕ್ಷಸನು ತ । ಮ್ಮೊಳಗೆ ಪೌರುಷ ಪಂಥ ಹೆಣಿಕೆಯಿಂದ ॥ ತಳ ಮುಗುಚಲು ಜಾವಪರಿಯಂತ ಹೊಡೆದಾಡ । ಲಿಳೆಗೊರಗಿಸಿದ ಮಿತ್ರಘ್ನರಾಕ್ಷಸನ ॥ ಬಹಳ ॥ ೨ ॥

ವಾರ್ಧಿಕ

ದನುಜ ಮಿತ್ರಘ್ನ ರಾಕ್ಷಸನು ಯುದ್ಧದಿ ಬಿದ್ದ । ಹೆಣನ ನೋಡಲು ಪಾಪವೆಂದು ತಾವರೆಯ ಮಿ । ತ್ರನು ಪಶ್ಚಿಮಾಂಬುಧಿಗೆ ಸಾರಿದನು ತದ್ದಿನಂ ಶಕ್ರಜಿತು ಪಂಥದಿಂದ ॥ ಮನನೊಂದು ರಿಪುಗಳಂ ಜಯಿಸಿಕೊಳದನಕ ಪ । ಟ್ಟಣವ ಹೊಗೆನೆಂದು ಮಿಕ್ಕೆಲ್ಲರಂ ಕಳುಹಿದಂ । ಘನ ಪರಾಕ್ರಮದಿಂದ ಮಾಯಕದ ಕಲ್ಪಿತವ ನೆನೆದು ಮಾಡಿದ ಘಾತವ ॥ ೧ ॥

ರಾಗ ಮಾರವಿ ಏಕತಾಳ

ಕಾಳಗಕೆನುತಲೆ । ಮೇಲಭ್ರದಿ ನಿಂ । ದಾಳುತನದಿ ವಿಷ । ಗಾಳಿಯ ಮಹಫಣಿ । ಗೋಲನು ಮಹಿಸಿ ಕ । ರಾಳ ಶರವ ಕಪಿ । ಪಾಳೆಯಕಿಟ್ಟನು ।

ತೋಳ ಬಲ್ಪಿನಲಿ ॥ ಪೇಳಲೇನು ॥ ೧ ॥ ಬಸಿವಾ ರುಧಿರವ । ನೊಸೆದು ಭೂತಂಗಳು । ದೆಸೆದೆಸೆ ತುಂಬುತ । ಪಸರಿಸಿತೆಲ್ಲವ । ಘಸಣಿಗೊಳುತ ಪರ । ವಶನಾಗಲು ಪವ । ಡಿಸಿದುದು ವಾನರ । ವಿಸರವು ಜವದಿ ॥ ಪೇಳಲೇನು ॥ ೨ ॥ ಹನುಮನಿಗೊಂಭ । ತ್ತಿನಜಗೆರಡು ಪು । ತ್ತನಲಜಗಾರಂಗ । ದನಿಗೀರೈದ । ಪನಸ ಗವಯು ಮುಖ । ವನಚರಸಂಕುಲ । ವನು ತಗಲಿತು ಭುಜ । ಗನ ಶರ ಬಂದು ॥ ಪೇಳಲೇನು ॥ ೩ ॥ ಒರಗಿದ ನೀಲನು । ಸೊರಗಿದ ಶತಬಲಿ । ಮುರುಗಿದ ಗವಯ ಬಿ । ದ್ದೊರಳೆ ಸುಷೇಣನು । ಭರದಲಿ ನಿದ್ರಾ । ಜ್ವರದಿಂದಲಿ ವೈ । ಮರೆತರು ಸುರತತಿ । ಕರಗಿದರೆಲ್ಲ ॥ ಪೇಳಲೇನು ॥ ೪ ॥ ದುರುಳನ ಕಪಟವ । ನರಿತಾ ಕ್ಷಣ ತರ । ಹರಿಸದೆ ದೃಢದಲಿ । ಶರ ಸ್ವೀಕರಿಸುತ । ಶರಧಿಯೊರಗೆ ನೆಲ । ಸಿರುವನಂತನ ಮೇ । ಲೊರಗುವಂದದಿ ರಘು । ವರ ಪವಡಿಸಿದ ॥ ಪೇಳಲೇನು ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಉರಗಪಾಶದ ಬಿಗುಹಿನಲಿ ವೈ । ಮರೆದನೆಂಬುದ ಕೇಳ್ದು ನಿಶಿಯಲಿ । ಗರುಡ ಬಂದೆಬ್ಬಿಸಿದ ಖಳರಾ । ರಿಯಡಂತೆ ॥ ೧ ॥ ಮರುದಿವಸದುದಯದಲಿ ಕೋಟೆಯ । ಸರಿದರಂದಿನ ಘಸಣಿಗೋಸುಗ । ಪುರದ ಜನ ತಲ್ಲಣಿಸೆ ರಾವಣ । ನರಿತು ಮನದಿ ॥ ೨ ॥ ಕರೆದನಾ ಧೂಮ್ರಾಕ್ಷರಾಕ್ಷಸ । ನುರುಪರಾಕ್ರಮಿ ವಜ್ರದಂಷ್ಟ್ರನ । ಧುರ ಗೆಲುವ ಬಗೆಗೆಂದು ಕಳುಹಿದ । ಭರದೊಳಂದು ॥ ೩ ॥

ರಾಗ ಪಂಚಾಗತಿ ಮಟ್ಟೆತಾಳ

ವಾಲಿಸುತನು ರಣದೊಳವರ । ಕಾಲನೂರಿಗಟ್ಟಲಾಗ । ಮೇಲೆ ಬಂದ ಕಂಪನೆಂಬ । ಖೂಳ ದೈತ್ಯನ ॥ ಸೀಳು ಮಾಡಿ ಬಿಸುಟ ಹನುಮ । ಬಾಳ ಸುಪ್ರತಾಪದಿಂದ । ನೀಲ ನಿಂದು ಸಚಿವಪತಿಯ । ಬೀಳಗೆಡಹಿದ ॥ ॥ ೧ ॥ ದಾನವೇಂದ್ರ ತಾನೆ ಬಂದು । ವಾನರೇಂದ್ರನೊಡನೆ ಕಾದಿ । ತ್ರಾಣದಿಂದ ಸೋಲಿಸಿದನು । ಭಾನುತನುಜನ ॥ ಕಾಣುತಿದಿರು ಬಂದು ವೈ । ಶ್ವಾನರನ ಕುಮಾರಕನನು । ಕ್ಷೋಣಿಗೊರಗಿಸಿದನು ಮೂರು । ಬಾಣದಿಂದಲಿ ॥ ೨ ॥ ಮರುತಜಾತನೊಡನೆ ಸೋತು । ಮರಳಿ ತಿವಿದು ಗೆಲುತಲವನ । ತೆರಳಿ ಬಂದನೀಶನಂತೆ । ಧುರಪರಾಕ್ರಮಿ ॥ ಬರುತ ಬರುತ ಕಪಿಗಳನ್ನು । ತರಿದನೆಂದು ಕೋಪದಿಂದ । ಧರಣಿಪಾಲನನುಜ ಪೊರಟ । ನುರುತರಾಗ್ರದಿ ॥ ೩ ॥

Scanned by CamScanner

ರಾಗ ಮಾರವಿ ಮಟ್ಟೆತಾಳ

ನೀನೊ ರಾವಣೇಂದ್ರನೆಂಬ । ದನುಜ ಪಾತಕ ॥ ವಾನರರನು ಬರಿದೆ ಕೊಲುವು । ದೇನು ಘಾತಕ ॥ ೧ ॥ ಬಲ್ಲೆ ನಿನ್ನ ಬಗೆಯ ಜಾತಿ । ಕಳ್ಳನಹೆ ಭಲಾ ॥ ಅಲ್ಲಿ ಮೂಗ ಕೊಯ್ದ ಜಾಣ । ನಲ್ಲವೇನೆಲಾ ॥ ೨ ॥ ಕಳ್ಳರಂತೆ ಸೀತೆಯನ್ನು । ಕದ್ದು ತಂದವ ॥ ಬಲ್ಲತನದಿ ನೋಡು ನಮ್ಮ । ಬಾಣ ಜಾತವ ॥ ೩ ॥ ಬಾಣವೆಸೆವ ಬಗೆಯನೆಲ್ಲ । ಬಲ್ಲೆ ನಿನ್ನನು ॥ ತಾಣದಂಗ ಗಳ ಪರೀಕ್ಷೆ । ಕಾಣೊ ನಮ್ಮನು ॥ ೪ ॥ ಬಿಡುವ ರಾವಣನ್ನ ಶರವ । ಕಡಿದ ಲಕ್ಷ್ಮಣ ॥ ಝಡಿದು ಕೋಪದಿಂದ ಪ್ರತಿಗೆ । ತೊಡುವನಾ ಕ್ಷಣ ॥ ೫ ॥ ಹಲವು ಶಸ್ತ್ರದಿಂದ ಕಾದಿ । ಗೆಲವು ತೋರದೆ ॥ ಇಳೆಗೆ ಮೂರ್ಛೆಗೊಂಡು ಬಿದ್ದ । ಖಳನ ಬಾಧೆಗೆ ॥ ೬ ॥

ಕಂದ

ಯುದ್ಧಾಂಗಣದೊಳು ತಮ್ಮನು । ಬಿದ್ದಿರ್ದುದ ಕಂಡು ತಾನೆ ಬಂದಾ ರಾಮಂ ॥ ಉದ್ಧಟ ರಾವಣನೊಡನಂ । ರೌದ್ರಾನ್ವಿತನಾಗಿ ಕಾದಿದಂ ಸಂಗರದೊಳ್ ॥ ೧ ॥

ರಾಗ ಶಂಕರಾಭರಣ ಏಕತಾಳ

ರಾವಣೇಂದ್ರನೆಂಬ ದೈತ್ಯ । ನೀನೊ ನಮ್ಮಂಗನೆ ಸೀತಾ । ಭಾವೆಯ ತಂದಿಟ್ಟುಕೊಂಡ । ಕಾರಣವೇನು ॥ ೧ ॥ ಭೂವರೇಣ್ಯ ಕೇಳಾದರೆ । ಯಾವ ಕಾರ್ಯಕಾಗಿ ನೀನು । ಕೇವಲ ನಮ್ಮನುಜೆಯ ನಾ । ಸಿಕವ ಕೊಯ್ದೆಯ॥ ॥ ೨ ॥ ಹೆಂಗಸಾಗಿ ತಾನು ಪರರ । ಇಂಗಿತವನರಿಯದೆ ಮೇ. । ಲಂಗದಲ್ಲಿ ಬೀಳ್ವುದಂತ । ರಂಗವೇನಯ್ಯ ॥ ೩ ॥ ಆದಡಾಗಲೊಂದು ಮೋಸ । ಮೇದಿನಿಪಾಲಕಾಧೀಶ । ಸೋದರರನೆಲ್ಲರ ಕೊಂದ । ಭೇದವೇನಯ್ಯ ॥ ೪ ॥ ಸಾಧುಮಾರ್ಗದಿಂದಲಿಪ್ಪ । ಯೋಗಿಗಳ ನೇಮನಿಷ್ಠೆ । ಬಾಧಿಸುವುದಂಗ ನಿನಗೆ । ಮೋದವೇನಯ್ಯ ॥ ೫ ॥ ಊರೊಳಾಗುವಾ ವಿಚಾರ । ಪಾರುಪತ್ಯಂ ಗಳನೆಲ್ಲ । ಯಾರು ಕೊಟ್ಟರಯ್ಯ ನಿನಗೆ । ಧಾರಿಣೀಪಾಲ ॥ ೬ ॥ ಸೂರ್ಯ ವಂಶಜಾತರ್ ನಾವು । ಧಾರಿಣಿ ನಮ್ಮದಾಗಿದೆ । ಬೇರೆ ಕೇಳ್ವರ್ಯಾರು ನಮ್ಮ । ಘೋರ ರಾಕ್ಷಸ ॥ ೭ ॥ ದೇವತೆಗಳೆಲ್ಲ ನಮ್ಮ । ಸೇವೆವಂತರಾದ ಮೇಲೆ । ಯಾವ ಸಂತೆಯಯ್ಯ ನೀನೀ । ದೂರು ಕೇಳ್ವರೆ ॥ ೮ ॥ ಕೋವಿದ ಜಾಣನಾದಡೆ । ಈ ವಿಧದ ಕರ್ಮಂಗಳ । ಯಾವ ಕೀರ್ತಿಗಾಗಿ ಮಾಳ್ಪೆ ।

ದ್ರೋಹಿ ರಾಕ್ಷಸ ॥ ೯ ॥ ನಾವು ದನುಜವಂಶದವರು । ಭೂವಲಯದಿ ಶ್ರೇಷ್ಠರೆಮ್ಮ । ನಾವನಾದರಿನ್ನು ಕೆಣಕಿ । ಜೀವಿಸಲುಂಟೆ ॥ ೧೦ ॥ ದಾನವ ಕೇಳ್ ಮುಂದವ । ಸಾನದ ಮಾತಂತಿರಲಿ । ಜಾನಕಿಯನು ಬಿಟ್ಟುಕೊಡುವ । ಮನಸುಂಟೇನು ॥ ೧೧ ॥ ನೀನು ನಿನ್ನ ತಾತ ಸಹಿತ । ಲೇನು ಕಾಣಿಕೆ ಕೊಟ್ಟರು । ಮಾನಿನಿಯನು ಬಿಡುವುದುಂಟೆ । ಮಾನವಾಧಿಪ ॥ ೧೨ ॥ ಕಾಣಿಕೆಯೊಂದುಂಟು ನಿನ್ನ । ಪ್ರಾಣಕೊಡ್ಡಿದಂತಾದೆನ್ನ । ಬಾಣವ ನೀ ತಾಳಿಕೊಳ್ಳೊ । ಹೀನ ರಾಕ್ಷಸ ॥ ೧೩ ॥ ಭಾನುವಂಶಜಾತನಿತ್ತ । ಬಾಣ ರಾವಣೇಂದ್ರನುಟ್ಟ । ಮಾನವಸ್ತ್ರ ತುಂಡಾದುದ । ನೇನ ಪೇಳ್ವೆಸು ॥ ೧೪ ॥ ಮತ್ತೆ ಗಜವು ತೇರು ವಾಜಿ । ಎತ್ತಿದಾ ಛತ್ರ ಚಾಮರ । ವೆತ್ತ ಹೋಯಿ ತೆಂದು ಬೆರ । ಗೆತ್ತುದಾ ಕ್ಷಣ ॥ ೧೫ ॥ ಹತ್ತು ತಲೆಯಾತನು ನಾ । ಚುತ್ತ ಲಿಪ್ಪಾಗ ವಾನರ । ಮೊತ್ತವು ಘೇಯೆನೆ ದನುಜ । ಬತ್ತಲೆ ನಿಂತ ॥ ೧೬ ॥

ವಾರ್ಧಿಕ

ಗೋಚರಿಸದಂದದಲಿ ನಾಲ್ಕು ಶರದಿಂ ಕಮಲ । ಲೋಚನನು ರಾವಣನ ಕಾಯದ ದುಕೂಲವಂ । ತಾ ಚಮತ್ಕಾರದಲಿ ಕತ್ತರಿಸೆ ತಿರು ಗಿದಂ ನಾಚಿಕೆಯ ಕಂಡು ಬಳಿಕ ॥ ನಾ ಚರಿಪುದಿಲ್ಲೆಂದು ರವಿಯಸ್ತನಾಗೆ ನೈ । ಶಾಚರೇಂದ್ರನು ಮನೆಯ ಸೇರುತಿರೆ ಕಪಿಪಾಳ್ಯ । ವೀಚೆಯಲಿ ಗೆಲ ವಾಯಿತೆಂದು ಶ್ರೀರಾಮನಿಗೆ ಪುಷ್ಪಾರ್ಚನೆಯ ಗೆಯ್ದರು ॥ ೧ ॥

ರಾಗ ಢವಳ ತ್ರಿವುಡೆತಾಳ

ಅಂಬರದಲಿ ಸಂಚರಿಸುವ ದಿವಿಜ ಕ । ದಂಬ ನಿರೀಕ್ಷಿಸುತಲಿ ಬಂದತಿ । ಸಂಭ್ರಮದಿಂದ ನೆರೆದರು ॥ ನೆರೆವುತ ಶ್ರೀರಾಮನ ಚರಣಕೆ । ತುಂಬೇ ಹೂಮಳೆಯ ಕರೆದರು ॥ ಶೋಭಾನೆ ॥ ೧ ॥ ಇಂದ್ರಾದಿಗಳಾಕಾಶದಿ ಸುರ । ದುಂದುಭಿ ಮೊಳಗುವುದೆಂದೆನುತಲೆ । ಗಂಧರ್ವಸತಿಯರ್ ಸಹಿತಾಗಿ ॥ ಸಹಿತಲೆ ಶ್ರೀರಾಮರ ಚರಣಕೆ । ಕುಂದಣದಾರತಿಯ ಬೆಳಗಿರೆ ॥ ಶೋಭಾನೆ ॥ ॥ ೨ ॥ ರಾಕ್ಷಸನು ದಿಗಂಬರನಾಗಿಹ । ಸಾಕ್ಷಿಯ ಪೇಳುವೆವೆಂದೆನುತಲೆ । ಯಕ್ಷರಂಗನೆಯರೊಲವಿಂದ ॥ ಒಲವಿಲಿ ರಾಮನ ಪಾದಕೆ ಕುಸು । ಮಾಕ್ಷತೆ ಗಳನು ತಳಿದರು ॥ ಶೋಭಾನೆ ॥ ೩ ॥

ವಾರ್ಧಿಕ

ಸ್ರವಣಪರ್ವತದಿಂದ ಮುಂದೆ ಬಂದಾ ಮಹಾ । ರ್ಣವವ ಕಾಣಿಸಿ ಕೊಂಡು ಸೇತುವಂ ಕಟ್ಟಿ ಕಪಿ । ನಿವಹಮಂ ಲಂಕೆಯಲಿ ಪಾಳ್ಯಮಂ ಕೆದರಿ

Scanned by CamScanner

ದುರ್ಗವ ಮುತ್ತಿ ಪುಡಿಗೆಯ್ವುತ ॥ ಬವರದಲಿ ಬಲು ರಾಕ್ಷಸರ ಕೊಂದು ರಾವಣನ । ವಿವಸನದಿ ನಿಲಿಸಿದಲ್ಲಿಗೆ ಸಂಧಿಯಾಯ್ತೆನುತ । ಲವಕುಶರಿಗುಸಿರಿದನು ವಾಲ್ಮೀಕಿ ಕಣ್ವಪುರದೆರೆಯನ ಕಟಾಕ್ಷದಿಂದ ॥ ೧ ॥

ಮಂಗಲ

ರಾಗ ಆಹೇರಿ ಏಕತಾಳ

ಮಂಗಲ ಸೀತಾರಾಮನಿಗೆ । ಜಯ । ಮಂಗಲ ನತಪರಿಣಾಮನಿಗೆ ॥ ಮಂಗಲಂ ॥ ಪ ॥ ದ್ಯುಮಣಿಕುಲಾಬ್ಧಿ ಸುಧಾಕರಗೆ । ಸುಮಶರಸನ್ನಿಭರೂಪನಿಗೆ ॥ ಕಮಲದಳಾಕೃತಿಲೋಚನಗೆ । ವಿಮಲಚರಿತನಿಗೆ ರಘುವರಗೆ ॥ ಮಂಗಲಂ ॥ ೧ ॥ ನಾರಾಯಣಗೆ ಮುಕುಂದನಿಗೆ । ಕ್ಷೀರಾಂಭೋನಿಧಿವಾಸನಿಗೆ ॥ ಸಾರಿದ ಭಕ್ತರ ಪೊರೆವನಿಗೆ । ಪಾರಾವಾರಗಭೀರನಿಗೆ ॥ ಮಂಗಲಂ ॥ ೨ ॥ ದೇವರ ದೇವ ಕೃಪಾಕರಗೆ । ರಾವಣವಂಶವಿನಾಶನಿಗೆ ॥ ಭಾವಜಜನಕಗೆ ಗಿರಿಧರಗೆ । ಪಾವನ ಫಲಿಮಾರ್ಮಠಪತಿಗೆ ॥ ಮಂಗಲಂ ॥ ೩ ॥

ಯಕ್ಷಗಾನ ಅಂಗದಸಂಧಾನ ಮುಗಿದುದು

ಶ್ರೀಕೃಷ್ಣಾರ್ಪಣಮಸ್ತು

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.
ಶಾ. ಶಕ ೧೮೭೪. ೧,೪೫೦-1-1952

Scanned by CamScanner